ಕೊರವಂಜಿ

Koravanji



ಆಗಸ್ಟ್
೧೯೫೪

★

ಸಂಪಾದಕರು:
ಶ್ರೀ|| ರಾ. ಶಿ.


ಬರಹಗಾರರು:


ಶ್ರೀ|| ಹಾ. ರಾ.
ಶ್ರೀ|| ಅ. ರಾ. ಸೇ.
ಶ್ರೀ|| "ಕೇಫ"
ಶ್ರೀ|| ರುದ್ರಪ್ಪ
ಶ್ರೀ|| ಸಾರಥಿ
ಶ್ರೀ|| ಪಾಟೀಲ
ಶ್ರೀ|| ಕಾಮತ್
ಶ್ರೀ|| ರಾಮಕೃಷ್ಣ
ಶ್ರೀ|| ಕೆ. ಎನ್. ಕಿಟ್ಟೂರ
ಶ್ರೀ|| ದಾಶರಥೀ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ಬಿಡಿ ಪ್ರತಿ ಕೇವಲ ನಾಲ್ಕಾಣೆ

ತಿಳಿನಗೆಯ ಮಾಸಪತ್ರಿಕೆ





ಬೆಂಗಳೂರು :—ಸ್ಟೇಟ್ಸ್ ಮತ್ತು ಶ್ರೀ
ಮೈಸೂರು :—ರಾಜಕಮಲ್, ಕೆ. ಜಿ. ಎಫ್.—ಗೇ
ಚಿತ್ರ ಮಂದಿರಗಳಲ್ಲಿ



A VIJAYA TALKIE RELEASE

13–8–54 ರಿಂದ

ನಿಮ್ಮ ನೆಚ್ಚಿನ ಚಿತ್ರಮಂದಿರಗಳಲ್ಲಿ
ಪ್ರದರ್ಶನಕ್ಕೆ ಬರುತ್ತದೆ.



ಪಕ್ಷಿರಾಜಾರವರ—

ಮಲೈ ಕಳ್ಳನ್ (ತಮಿಳು)

ಭಾನುಮತಿ, ಸಂಧ್ಯಾ, ಎಂ. ಜಿ.
ರಾಮಚಂದ್ರ ಮುಂತಾದವರ
ಅಭಿನಯ.



A VIJAYA ALKIE RELEASE

ಕೊರವಂಜಿ

ಸಂಪುಟ ೧೩ ಅಗಸ್ಟ್ ೧೯೫೪ ಸಂಚಿಕೆ ೫

ಕುಹಕಿಡಿಗಳು

ಯೂ ನೊದಲ್ಲಿ ಲಂಚನಿರೋಧಕ ಶಾಖೆಯನ್ನು ಖಂಡಿತ ಏರ್ಪಡಿಸಬಾರದೆಂದು ಎಲ್ಲರೂ ಒಪ್ಪಿರುವರಂತೆ.

* * *

ಜಿನೀವಾ ಸಮ್ಮೇಳನಕ್ಕೆ ಶ್ರೀ ಕೃಷ್ಣಮೆನನ್ನರು ಮಂಡ್ಯದ ಬೆಣ್ಣೆಯನ್ನು ತೆಗೆದುಕೊಂಡು ಹೋಗಿದ್ದರು ಎನ್ನುವುದು ಮಂಡ್ಯಕ್ಕೆ ಪ್ರಾಶಸ್ತ್ಯ ಕೊಡುವುದಾದರೂ ಶುದ್ಧ ಸುಳ್ಳಂತೆ.

* * *

ಜಿನೀವಾದ ಶಾಂತಿಸಮ್ಮೇಳನದಲ್ಲಿ ಭಾರತೀಯರು ಸೂತ್ರಧಾರತ್ವ ವಹಿಸಿದ್ದರಿಂದ, ಇಂಡೋ ಚೀನಾದಲ್ಲಿ ಶಾಂತಿ ಪಡೆಯ ಮುಖಂಡತ್ವವನ್ನೂ ಭಾರತ ಸ್ವೀಕರಿಸಬೇಕು ಎಂದರಂತೆ.

—ಇದಕ್ಕೇನು ನಮಗೆ ಅಭ್ಯಾಸ ಇದೆಯಲ್ಲ! ಕೊರಿಯಾಗೆ ಹೋಗಿ ಅನುಭವ ಪಡೆದಿಲ್ಲವೇ?

* * *

ಫಜಲುಲ್‌ಹಕ್ ಅವರ ಕಡೆಯ ಹೇಳಿಕೆಗೆ ಇಸ್ಕಂದರ್‌ರವ ರುಜು ಇತ್ತು ಎನ್ನುವುದು ಕುಹಕವಾದರೂ ದಿಟವೋ ಎನ್ನಿಸುತ್ತಲ್ಲವೇ?

* * *

ಆಸ್ಪತ್ರೆಯ ಸ್ಪೆಷಲ್ ವಾರ್ಡ್‌ಗಳಲ್ಲಿ ರೋಗಿಗಳು ಸಾಯುವುದು ಕಡಿಮೆಯಾಗಿದೆ ಎಂದೊಬ್ಬರು ಹೇಳಿದ್ದಾರೆ.

—ಕಾರಣ ವಿಶೇಷ ಚಿಕಿತ್ಸೆಯಲ್ಲ! ಮರಣ ತೆರಿಗೆಯ ಭೀತಿ!!

* * *

ಅಜ್ಮೀರ್ ಜುಲೈ ೨೬—

ಈದಿನ ಎ.ಐ.ಸಿ.ಸಿ. ಸಭೆ ಸರ್ವಾನುಮತದಿಂದ ಅಂತರ್ರಾಷ್ಟ್ರೀಯ ಸ್ಥಿತಿಯ ನಿರ್ಣಯವನ್ನೂ, ಭೂ ಸುಧಾರಣೆ ನಿರ್ಣಯವನ್ನೂ, ಪಂ॥ ನೆಹ್ರೂ ಅವರು ಹೇಳಿದ್ದಂತೆ ಪಾಸುಮಾಡಿತು.

—ಬಲು ಹಳೇ ಸುದ್ದಿ, ಹೊಸ ತಾರೀಖಿನಲ್ಲಿ!!

* * *

ಓಡಾ ನಾ
ರಿಕ್ಷಾ ಗೆ ಡ್ರಾ ಲಿ ವು ದು?
ಟೋ ಗ ಹೀ ಇ ಸ್ತೇ ಹೇ ಡೋ
ಆ ಳು ದ್ದ ರ ಗೆ ಡಾ
ರೆ ಓ

* * *

ಮೊನ್ನೆ ಪಟದ ಹಬ್ಬದಲ್ಲಿ ರಾಜಕಾರಣ ಪಟುಗಳೊಬ್ಬರು ಗೋರಂಟಿ ಪಟ ಹಾರಿಸಿದರಂತೆ.

—ಸೂತ್ರ ಇಲ್ಲದೆ ಪಟಹಾರಿಸೋದು ಕಲಿತೋರು, ಸೂತ್ರ ಇದ್ದ ಪಟಹಾರಿಸೋದು ಏನು ಆಶ್ಚರ್ಯ!

* * *

ತಿರುವಾಂಕೂರಿನಲ್ಲಿ ಈ ವರ್ಷ ಯಾವ ಕೈಗಾರಿಕೆಯನ್ನೂ ಸ್ಥಾಪಿಸುವುದಿಲ್ಲ ಎಂದು ಅಧಿಕೃತವಾಗಿ ಹೇಳಲಾಗಿದೆ.

—ಈ ಒಳ್ಳೆ ಬುದ್ಧಿ ಅಖಿಲಭಾರತಕ್ಕೂ ಬೇಗ ಬರಬಾರದೇ? ಈಗಿನ ಕಾರ್ಮಿಕರ ಕೂಗು ಕೇಳಿದಮೇಲೆ.

* * *

ಬಾಜಿ ಕಟ್ಟಿದ ಕುದುರೆಗಿಂತ, ನಾನು ಬಂದ ಜಟ್ಕಾಕುದುರೆ ಜೋರಾಗಿ ಓಡಿತಲ್ಲಪ್ಪಾ! ಎಂದೊಬ್ಬ ಬೋಲ ಬೋಲ ಮಾಡ್ತಿದ್ದನಂತೆ.

* * *

ಮೈಸೂರಿನಲ್ಲಿ ಮೀನಿನ ಕೈಗಾರಿಕೆ ಅಭಿವೃದ್ಧಿಪಡಿಸಲಾಗುತ್ತೆ. (ಸುದ್ದಿ)

—ಆಹಾ! ಗಾಳ ಹಾಕೋದು ಕಲಿತರೆ ಮೀನೂ ಸಿಗುತ್ತೆ, ಮೀನಾಕ್ಷೀನೂ ಸಿಗುತ್ತೆ!

* * *

ಉರಿಗಾಳು

ಮೆಡಿಕಲ್ ಕಾಲೇಜಲ್ಲಿ ಸೀಟುಸಂಪಾದಿಸಿ ಫೀಕಟ್ಟಿ ರಿಜಿಸ್ಟರಿಗೆ ದಾಖಲಾಗಿ ಜಯಭೇರಿ ಹೊಡೆದ ನಮ್ಮೂರಿನ ಹುಡುಗನಿಗೆ ನಾಳೆ ಸ್ವಾಗತಸಮಾರಂಭವನ್ನು ಮೆರವಣಿಗೆ ಬಾಜಾಬಜಂತ್ರಿ ಕುಶಾಲ್ ತೋಪು ಬಾಣಬಿರುಸು ಸಮೇತ ಏರ್ಪಡಿಸಿದೇವೆ, ಎಂದು ಒಬ್ಬರು ಬರೆದಿದ್ದಾರೆ.

* * *

ತಮ್ಮ ಮನೆಯಲ್ಲಿ ಆಸ್ತಿವಿಭಾಗದ ಜಗಳದಿಂದಾಗಿ ಅಣ್ಣತಮ್ಮಂದಿರಲ್ಲಿ ಕದನ ಉತ್ಪನ್ನವಾಗಿದೆಯೆಂದೂ, ಪುಢಾರಿಗಳಿಬ್ಬರ ಪ್ರೋತ್ಸಾಹದಿಂದ ಅವರೆಲ್ಲರೂ ಪೂರ ಕೊಬ್ಬಿರುವರೆಂದೂ ಸದ್ಗೃಹಸ್ಥರೊಬ್ಬರು ನೆಹರುವಿಗೆ ಮನವಿಮಾಡಿಕೊಂಡಿದಾರಂತೆ.

* * *

ಮೈಸೂರು ಕಾಂಗ್ರೆಸ್ ಪಕ್ಷದ ಒಳಬಿಕ್ಕಟ್ಟನ್ನು ಪರಿಹರಿಸಲು ಜಿನೀವಾ ಒಪ್ಪಂದ ಮಾರ್ಗದರ್ಶಕವಾಗಿದೆ ಎಂದೂ ಎರಡು ಗುಂಪಿನ ಮಧ್ಯೆ ಒಂದು ಗೆರೆ ಎಳೆದು, ತಕ್ಷಣ ನಿಶ್ಶಸ್ತ್ರೀಕರಣ ಮಾಡಬೇಕೆಂದೂ, ಪರರಾಷ್ಟ್ರ ಶಾಂತಿಸ್ಥಾಪನಾ ಧುರೀಣರಾದ ನೆಹರುವಿಗೆ ಪತ್ರ ಹೋಗಿವೆಯಂತೆ.

ನಮಗೆ ಬಲಯುತವಾದ ಪ್ರತಿಪಕ್ಷ ಅತ್ಯಗತ್ಯ, ಎಂದು ನೆಹರು ಅವರೇ ಹೇಳುತ್ತಿದಾರೆ ಎಂದಮೇಲೆ, ಕಾಂಗ್ರೆಸ್ ಪಕ್ಷದಲ್ಲೇ ಆ ಎದುರುಪಕ್ಷ ನಿರ್ಮಾಣವಾಗುತ್ತಿರುವುದು ಸ್ವಾಗತಾರ್ಹ.

* * *

ಅದೇ ಅಧ್ಯಾಪಕರನ್ನು ತಮ್ಮ ಶಾಲೆಯಲ್ಲಿ ಉಳಿಸಿಕೊಡಬೇಕು, ಎಂದು ವಿದ್ಯಾರ್ಥಿಗಳು ಉತ್ತರ ಇಂಡಿಯಾದ ಕಾಲೇಜುಗಳಲ್ಲಿ ಭಾರಿ ಚಳುವಳಿ ಹೂಡುತ್ತಿರುವುದರ ಗುಟ್ಟು ಈಗ ಹೊರಬಿದ್ದಿದೆ ...ಅವರನ್ನು ಇನ್ನೂ ಒಂದು ವರ್ಷ ಲೇವಡಿ ಎಬ್ಬಿಸಿ ಕೀಟಲೆ ಮಾಡಿ ಹೀಯಾಳಿಸಿ ಆನಂದಪಡುವುದಕ್ಕಾಗಿ.

* * *

"ರಾಜಾಜಿಯವರು ಈ ಚಿತ್ರವನ್ನು ಕಟುವಾಗಿ ಟೀಕಿಸಿದಾರೆ"(ಲೇಖನ) ತರುಣ ತರುಣಿಯರು ಆಚಿತ್ರವನ್ನು ನೋಡುವುದಕ್ಕಾಗಿ ತಂಡೋಪತಂಡವಾಗಿ ನುಗ್ಗಲಿ ಎಂಬ ಉದ್ದೇಶದಿಂದಲೇ ಪ್ರದರ್ಶನಕಾರರು ಅವರ ಅಭಿಪ್ರಾಯವನ್ನು ಹೊರಗೆಡಹಿರುವುದು.

ಗೋವಾದ ಮೂಲಕ ಚಿನ್ನದ ಹೊಳೆ ಹರಿಯುತ್ತದೆ ಭಾರತಕ್ಕೆ, ಆದ್ದರಿಂದ ಅದನ್ನು ಈಗಿರುವಂತೆಯೇ ಉಳಿಸಿ, ಎಂದು ಅನೇಕ ಸರಾಫ್ ಅಂಗಡಿ ಮಾಲೀಕರು ಗುಪ್ತ ಪತ್ರವನ್ನು ತಯಾರಿಸುತ್ತಿರುವರಂತೆ.

*　　*　　*

ಗಾಂಧಿಜಿಯವರ ಚಿತ್ರವನ್ನಾಗಲಿ ಹೆಸರನ್ನಾಗಲಿ ಚುನಾವಣೆಗಳಿಗೆ ಇನ್ನು ಉಪಯೋಗಿಸಕೂಡದೆಂದು ಕಾಂಗ್ರೆಸ್ ಅಧ್ಯಕ್ಷರು ಆಜ್ಞೆಮಾಡಿದಾರೆ....ಟೋಪಿ ಇದೆಯಲ್ಲ, ಅಷ್ಟೇಸಾಕು.

*　　*　　*

ರೋಂನಗರವನ್ನು ಒಂದೇ ದಿವಸದಲ್ಲಿ ಕಟ್ಟಿಮುಗಿಸಲಿಲ್ಲ; ನೂರಾರು ವರ್ಷಗಳು ಬೇಕಾಯಿತು ಎಂದು ಶ್ರೀ ಸಿ. ಡಿ. ದೇಶ್‌ಮುಖ್‌ರವರು ಹೇಳಿದರು, ಮೊನ್ನೆ ....ಹೌದು. ಆಗಲೂ ಡಿ. ಪಿ. ಡಬ್ಲ್ಯೂ. ಇದ್ದಿರಬೇಕಲ್ಲವೆ?

*　　*　　*

ಮೈಸೂರು ಕಾಫಿ ಹೊರದೇಶಗಳಲ್ಲಿ ಖ್ಯಾತಿಪಡೆದಿದೆ ಆದರೆ, ಪರದೇಶಗಳಲ್ಲಿ, ಅವರಿಗೆ, ನಮ್ಮ ಮೈಸೂರು ಹೋಟಲುಗಳಲ್ಲಿ ಬಳಸುವ ಪುಡಿಯಲ್ಲಿರುವ ಇತರೇ ಮಿಶ್ರಪದಾರ್ಥಗಳ ಅಳತೆ ಪ್ರಮಾಣ ಹೇಗೆ ತಿಳಿದುಬಂತು?

*　　*　　*

"ನಮ್ಮ ಹಳ್ಳಿಗೆ ಈ ಕೆರೆಯೇ ಆಧಾರ" ಎಂದು ಅವರು ಅರ್ಜಿ ಬರೆದುಕೊಂಡಿದಾರೆ. ಪಾಪ! ಬೇಗ ಅವರು ಕೇಳಿದ್ದನ್ನು ಕೊಟ್ಟುಬಿಡುವುದು ಕ್ಷೇಮ.

*　　*　　*

"ಇಂದೂರಿನಲ್ಲಿ ವಿದ್ಯಾರ್ಥಿಗಳ ಪ್ರದರ್ಶನ"....ಗೊತ್ತಿದ್ದರೆ, ನಮ್ಮೂರಿಂದಲೂ ಪ್ರದರ್ಶನಕ್ಕೆ ಹಲವು ಹೈಕಳನ್ನು ಕಳುಹಿಸಬಹುದಾಗಿತ್ತು; ಆದರ್ಶವಿದ್ಯಾರ್ಥಿಗಳು ನಮ್ಮಲ್ಲೂ ಇಲ್ಲವೇನು?

*　　*　　*

ಮದುವೆಯೇ ಪ್ರತಿಯೊಬ್ಬ ಹೆಣ್ಣುಮಕ್ಕಳ ಜನ್ಮಸಾಫಲ್ಯಕ್ಕೆ ಮಾರ್ಗ; ತಾಯ್ತನವೇ ಸ್ತ್ರೀಗೆ ಭೂಷಣ, ಎಂದು ರಾಜಾಜಿ ಮಹಿಳಾವಿದ್ಯಾಲಯವೊಂದರಲ್ಲಿ ಹೇಳಿದರಂತೆ....ಸದ್ಯಕ್ಕೆ, ಗಂಡು ಹುಡುಗರ ವಿದ್ಯಾಲಯದಲ್ಲಿ ಇದೇ ಉಪದೇಶವನ್ನು ಯಾರೂ ಹೇಳುತ್ತಿಲ್ಲ.

*　　*　　*

ಹುಲಿ ಬಂತು!

ಒಂದು ಊರಿನ ಹತ್ತಿರ ಒಂದು ಕಾಡು ಇತ್ತಂತೆ. ಅಲ್ಲಿ ಒಂದು ಹುಲಿ ಇತ್ತಂತೆ. ಆ ಹುಲೀಗೆ ಜೀವನವೇ ಬೇಸರವಂತೆ. ಏಕೆಂದರೆ, ಅದು ಷಿಕಾರಿ ಮಾಡಿದ ದನದಲ್ಲಿ ಅರ್ಧಪಾಲನ್ನು ಅರ್ಧಾಂಗೀಗೆ ಬಿಡಬೇಕಾಗಿತ್ತಂತೆ. ಅದಕ್ಕೋಸ್ಕರ ಯಾರಿಗೂ ಕಾಣದಹಾಗೆ ಷಿಕಾರಿ ಮಾಡಲು ಒಂದು ಯೋಜನೆ ಯೋಚಿಸುತ್ತಿತ್ತಂತೆ.

ಆಗ ಒಂದು ಯೋಚನೆ ಹೊಳೆಯಿತಂತೆ, ಆ ಹುಲೀಗೆ. ಕೂಡಲೆ ಹೆಂಡತೀನ ಕರೆದು ಒಂದು ಕತೆ ಹೇಳಿತಂತೆ. ಯಾವ ಕತೆ ಗೊತ್ತೇ? "ಹುಲಿಬಂತು ಹುಲಿ ಬಂತು" ಕತೆ.

ಹೆಂಡತಿ ಹುಲಿ ಹೆಣ್ಣಲ್ಲವೇ? ಹೆಣ್ಣಿಗೆ ಹೇಳಿದ ಸುದ್ದಿ ಕಹಳೆಬಾಯಿಗೆ ಮುತ್ತು ಕೊಟ್ಟಹಾಗಲ್ಲವೇ? ಆ ಹೆಣ್ಣು ಹುಲಿ ಊರಲ್ಲೆಲ್ಲಾ ಈ ಕತೆ ಹೇಳಿಕೊಂಡು ಬಂತಂತೆ.

* * *

ಆ ಊರಿನ ತೆರಿಗೆ ಇಲಾಖೆಯವ, ಆ ಊರಿನ ವ್ಯಾಪಾರಿಯೊಬ್ಬನ ಮೋಟಾರು ಕಾರು ಎರವಲು ಪಡೆದು, ತನ್ನ ಅತ್ತೆಯ ಮನೆಗೆ ಹೋಗಲು ಆ ಕಾಡುದಾರಿಯಲ್ಲಿ ಹೊರಟನಂತೆ. ಅರ್ಧದಾರಿಯಲ್ಲಿ ಡ್ರೈವರನು ಹೇಳಿದನಂತೆ—"ಅಯ್ಯೋ! ಹುಲಿ ಬಂತು ಹುಲಿಬಂತು" ಎಂದು. ಏಕೆಂದರೆ ರಸ್ತೆಯ ಪಕ್ಕದಲ್ಲೇ ಹುಲಿ ಮಲಗಿದ್ದನ್ನು ನೋಡಿದನಂತೆ.

ತೆರಿಗೆ ಇಲಾಖೆಯವನಿಗೆ "ಹುಲಿಬಂತು ಕತೆ ಗೊತ್ತಿತ್ತು". ಆದರೂ ಡ್ರೈವರನು ನಡುಗುವುದನ್ನು ನೋಡಿ, ಅವನಿಗೆ ಧೈರ್ಯಕೊಡಲೋಸುಗ ತಾನು ಕಾರಿಂದ ಇಳಿದು "ಎಲ್ಲೋ ಹುಲಿ" ಎಂದನಂತೆ. ಆ ವೇಳೆಗೆ ಹುಲಿ ಹಾರಿಬಂತಂತೆ. ಡ್ರೈವರನು ಹೇಳದೆ ಕೇಳದೆ ಗಾಡಿಬಿಟ್ಟನಂತೆ.

ಊರಿಗೆ ಬಂದು ಹೀಗಾಯ್ತು ಎಂದಾಗ ವ್ಯಾಪಾರಿಯು ಅವನಿಗೆ ಬಡ್ತಿ ಕೊಟ್ಟನಂತೆ.

ಸಂಸ್ಕೃತಿ ಪ್ರಹಾರ!

"ಬಾಣಾವರದ ಗೋವಿಂದಯ್ಯನಿಗೆ ತಿನ್ನುಕ್ಕೆ, ಉಣ್ಣುಕ್ಕೆ ಸಾಕಾದಷ್ಟಿತ್ತು. ಮಾನ, ಮರ್ಯಾದೆಯೂ ಇತ್ತು. ಅಂದಮೇಲೆ ಸರ್ಕಾರ, ಪೋಲೀಸು ಅಂದರೆ ಭಯ ಭಕ್ತಿ ಇತ್ತು. ಆರಕ್ಕೆ ಹಿಗ್ಗದೆ, ಮೂರಕ್ಕೆ ತಗ್ಗದೆ ಸಾಮಾನ್ಯರಂತೆ ಐದಡೀನೇ ಬೆಳೆದು ತಲೆತಾಕದಂತೆ ನೋಡಿಕೊಂಡಿದ್ದ. ಗಾಂಧಿ ಫಂಡಿಗೆ ಚಂದ ಕೊಟ್ಟಿದ್ದ. ಚಂದ ವಸೂಲುಮಾಡಿ ರಸೀತಿ ಪುಸ್ತಕ ಕಳೀಲಿಲ್ಲ. ಸಾರ್ವಜನಿಕ ಭಾಷಣಕಾರರ ಮೇಲೆ ಕಲ್ಲು, ಕಡೆಗೆ ಒಂದಿಷ್ಟು ಸಗಣಿ, ಬೇಡ ಒಂದು ಟೊಮೊಟೊ ಎಂದೂ ಎಸೀಲಿಲ್ಲ. ಕಡೆಗೆ ಒಂದು ನವೀನ ಕಾದಂಬರೀನೂ ಓದಲಿಲ್ಲ. ಅಂದ ಹಾಗೆ ಅವನು ಎಂದೂ ಆತ್ಮಹತ್ಯೆಯ ಯೋಚನೇನೇ ಮಾಡಲಿಲ್ಲ.

"ಗೋವಿಂದಯ್ಯ ಮಹಾನುಭಾವ ಕಣ್ರಪ್ಪ. ದೇವ್ರು ಅವನನ್ನ ಸ್ವರ್ಗಕ್ಕೇ ಕರ್ಕೊಂಡಿರ್ಬೇಕು"

"ಗರಮಾಗರಂ ಓಂಪುಡಿ ಬೇಕಾದರೆ ಬೇಗ ಬೇಗ ತಿನ್ನು. ಇನ್ನೊಂದು ತಟ್ಟೆ ತರಸ್ತೀನಿ. ಸೇಟ್‌ಗೆ ಬಿಲ್ ಒಪ್ಸೋದು ಇವತ್ತು ನೀನು ತಾನೆ"

"ಗೋವಿಂದಯ್ಯನಿಗೆ ಸ್ವರ್ಗವೆಲ್ಲಿ ಸಿಗುತ್ತಪ್ಪ. ಚಿತ್ರಗುಪ್ತರು ಅವನನ್ನ ನರಕಕ್ಕೆ ದಾಖಲು ಮಾಡದೆ ಇರುಕ್ಕೆ ಸಾಧ್ಯವೇ ಇಲ್ಲ"

"ಏನೋ ವಿಚಿತ್ರವಾಗಿದೆಯಲ್ಲ....ಗೋವಿಂದಯ್ಯನ ಕಥೆ ಮುಂದಕ್ಕೆ ಏನಾಯ್ತು ಹೇಳಪ್ಪ"

"ಹೇಳ್ತೀನೆ ಕೂತ್ಕೊಳ್ಳಿ" ಎಂದು ಸೀನಪ್ಪ ಗೋವಿಂದಯ್ಯನ ಕಥೆಯನ್ನು ಹೇಳತೊಡಗಿದ—

"ಅಷ್ಟೊಂದು ಧರ್ಮವಾಗಿ ಕಾಲಹಾಕುತ್ತಿದ್ದ ಗೋವಿಂದಯ್ಯ ಬರ್ತಾ ಬರ್ತಾ ಭಾರಿ ಕೇಡಿಯಾಗ್ಬಿಟ್ಟ. ನೂರೆಂಟು ಜನಕ್ಕೆ ನೂರೆಂಟು ಮೋಸಮಾಡಿದ. ಗಂಟು ಕೊಟ್ಟವರಿಗೆ ವೆಂಕಟರಮಣನ ವೇಷ ತೋರಿಸಿದ. ಪೋಲೀಸ್ ಇನ್ಸ್‌ಪೆಕ್ಟರ್ ಮನೇಲಿ ಕಳ್ಳತನಮಾಡಿ ಬಚಾವಾದ. ಚಿಕ್ಕಪ್ಪನಿಗೆ ವಿಷ ಇಟ್ಟು ಕೊಂದು ಅವನ ಆಸ್ತಿ ಹೊಡೆದ. ಮೊನ್ನೆ ಇದ್ದಕ್ಕಿದ್ದಹಾಗೇ ಯಾವುದೋ ಕೆಟ್ಟ ಖಾಯಿಲೆ ಬಂದು

ಹಾಸಿಗೆಮೇಲೆ ಬಿದ್ದುಕೊಂಡ. ಸಾಯೋ ಘಳಿಗೆ ಬಂತು. ಗೋವಿಂದಯ್ಯನಿಗೆ ಕುಮ್ಮಕ್ಕು ಕೊಡುತ್ತಿದ್ದ ಶಿಂಗ್ರಿ ಬಂದು ಕಾಣಿಸಿಕೊಂಡ. ಗೋವಿಂದಯ್ಯ ಕೆಂಚು ಗಣ್ಣುಗಳನ್ನು ಅಗಲವಾಗಿ ತೆರದು ಶಿಂಗ್ರಿಯನ್ನು ಹತ್ತಿರ ಕೂರಿಸಿಕೊಂಡು ಹೇಳಿದ –

"ಲೋ ಶಿಂಗ್ರಿ! ಜ್ಞಾಪಕ ಇದ್ಯೇನೋ ನಿನಗೆ — ಮೂರು ಜನ, ಒಬ್ಬ ಜರಿ ರುಮಾಲಿನವ—ಒಬ್ಬ ಬಿಳೀ ಟೋಪಿಯುವ—ಇನ್ನೊಬ್ಬ ಭಾಗವತರ ಹಾಗೆ ಜುಟ್ಟು ಬಿಟ್ಟುಕೊಂಡಿದ್ದವ, ಕಳೆದವರ್ಷ ನಮ್ಮೂರಿಗೆ ಬಂದು ಮಿಡ್ಲಸ್ಕೂಲಿನಲ್ಲಿ ಭಾಷಣ, ಕಥೆ, ಪುರಾಣ ಹೇಳಿ ನಮಗೆ ಬುದ್ಧಿ ಏಳಿಕೊಟ್ರಲ್ಲ ಮಹಾನುಭಾವ್ರು! ಆ ಭಾಗ ವತ್ರು ಒಂದು ಕಥೆ ಏಳದ್ರಲ್ಲ... "ನಳಕೂಬರನ ಕಥೆ" ಅಂಥ! ನಿನಗೆ ಜ್ಞಾಪಕ ಇವ್ಯೇನೋ ಶಿಂಗ್ರಿ....ಅವನು ಬದುಕಿದ್ದಾಗ ಅಷ್ಟೊಂದು ಪಾಪಕರ್ಮ ಮಾಡಿದ್ರೂ ಅವನಿಗೆ ಸ್ವರ್ಗವೇ ಸಿಕ್ತಲ್ಲ— ಸಾಯೋ ಘಳಿಗೇಲಿ ನಾರಾಯಣ ನಾಮಸ್ಮರಣೆ ಮಾಡಿದ್ದಕ್ಕೆ....ಜ್ಞಾಪಕ ಐತೇನೋ ಶಿಂಗ್ರಿ" ಅಂತ

"ಜ್ಞಾಪಕ ಐತೆ ಗೋವಿಂದಯ್ಯ....ಅಂಗಾದ್ರೆ ಬೇಗ ಹೇಳ್ಬಿಡು—ನಾರಾಯಣ ನಾರಾಯಣ ಅಂತ ಎರಡುಸಾರಿ, ನೀನು ಮಾಡಿದ ಪಾಪವೆಲ್ಲ ಅಳಿಸಿಹೋಗುತ್ತೆ"

ಗೋವಿಂದಯ್ಯ "ನಾರಾಯಣ" "ನಾರಾಯಣ" ಅಂತ ಬಾಯಲ್ಲಿ ಹೇಳು ತ್ತಿದ್ದ. ಯಾವಾಗಲೋ ಕಣ್ಣುಮುಚ್ಚಿಕೊಂಡ....

"ಈಗ್ಹೇಳಿ....ಗೋವಿಂದಯ್ಯನಿಗೆ ಸ್ವರ್ಗವೋ— ನರಕವೋ?"

"ನರಕವಂತೂ ಖಂಡಿತ ಕಣಯ್ಯ. ಆದರೆ ಗೋವಿಂದಯ್ಯ ಕಡೆ ಕಡೆಗೆ ಭಾರಿ ಕೇಡಿಯಾದ ವಿಷಯ ನಮಗೆ ಮುಖ್ಯ" ಎಂದ ಬೀಚಿ.

"ಸಾಯೋವಾಗ ಗೋವಿಂದಯ್ಯ ನಳಕೂಬರನ ಕಥೆ ಜ್ಞಾಪಿಸಿಕೊಂಡನಲ್ಲ ಅದನ್ನು ಅವರಿಗೆ ಯಾರು ಹೇಳಿದ್ರು" ಎಂದು ಮುಖವನ್ನೆಲ್ಲ ಹಣಿಮಾಡ್ಕೊಂಡು ಕೇಳಿದ ವಿಜ್ಞಾನಭಿಕ್ಷು.

ಇದು ಯಾವನೋ ಸಂಸ್ಕೃತಿ ಪ್ರಸಾರಿಕನ ಕೈವಾಡ ಕಣಯ್ಯ" ಎಂದು ಕೂಗಿಯೇ ಬಿಟ್ಟ ರೇವಣ್ಣ.

— ಹಾ. ರಾ.

ತಿದ್ದುಪಡಿ :

— ನಮ್ಮ ಜೂಲೈ ಸಂಚಿಕೆಯಲ್ಲಿ ಕೊಡಲಾದ ಕೆನರಾ ಮ್ಯೂಚುವಲ್ ಅಶ್ಯೂರೆನ್ಸ್ ಕಂಪೆನಿಯ ಜಾಹಿರಾತಿನಲ್ಲಿ ಬೋನಸ್ ಪ್ರತಿ **ಎರಡುಸಾವಿರಕ್ಕೆ** ಎಂದು ತಪ್ಪು ಅಚ್ಚಾಗಿದೆ. ಈ ತಪ್ಪಿಗಾಗಿ ನಮ್ಮ ಕ್ಷಮಾಪಣೆಗಳು. ಬೋನಸ್ ಪ್ರತಿ ವರ್ಷಕ್ಕೆ ರೂ ೧೮ ಮತ್ತು ೧೫, ಪ್ರತಿ **ಒಂದುಸಾವಿರಕ್ಕೆ** ಎಂದು ಓದಿಕೊಳ್ಳ ಬೇಕಾಗಿ ವಿನಂತಿ.

ಹೊಟ್ಟೆಶೂಲೆ

(ನಾದಲೀಲೆಯಪ್ರಾಕ್ಸಿ)

ಕೋಲು ಸಖೀ ಚಂದ್ರಮುಖೀ ಕೋಲೆ! ಹೊಟ್ಟೆಶೂಲೆ! — ಪ —

ಮುಂಜಾವದ ಮಂಜಿನೊಡನೆ ಮೊದಲಾಯಿತು ನಲ್ಲೆ
ಸಂಜೆ ದೋಸೆ, ರಾತ್ರಿ ಕಡುಬು, ಈಗ ಇದರ ಹಲ್ಲೆ
(ಕಂಗೆಡಿಸುವ ನೋವು ಒಳಗೆ, ಮಂಗನಂಥ ಮುಸುಡಿ ಹೊರಗೆ)
ಎತ್ತಹೋದ ಹಾಳು ವೈದ್ಯ? ಹೊಟ್ಟೆಯಾಯ್ತು ಕಲ್ಲೇ — ೧ —

ಆಟವಲ್ಲ ನೋಟವಲ್ಲ ಕೋಟಲೆಯಿದು ನಾರೀ
ಮುಗಿಲು ಭೂಮಿ ಕುದಿವುದಿದರ ನೋವು ದುಃಖಕಾರಿ
(ಕಂಗೆಟ್ಟೆನು. ಹಾಳು ಆಸೆ! ತಿಂದೆ ನಾ ಮಸಾಲೆದೋಸೆ!)
ಮಂಗನಾದೆ ವೈದ್ಯ ನಿನ್ನ ಬರುವೆನೆಂದು ಸಾರಿ?
ಆಟವಲ್ಲ, ಬೇಟವಲ್ಲ ಕೋಟಲೆ ಇದು ನಾರಿ! — ೨ —

ಬೆಳ್ಳಿ ಹಣವ ಚೆಲ್ಲಿ ದೋಸೆ ತಿಂದೆ ನಾನು ಬಾಲೆ
ಡೊಳ್ಳಾಯಿತು ನನ್ನ ಹೊಟ್ಟೆ. ಖಾಲಿ ಪರ್ಸ ಮೂಲೆ
(ಕಂಗೆಟ್ಟೆನು ಮೀನಾಕ್ಷಿ! ಹಾರಲಿಹುದು ಪ್ರಾಣಪಕ್ಷಿ)
ಮತ್ತೆ ಮತ್ತೆ ಕರುಳು ಕುದಿದು, ಹೆಚ್ಚಾಯಿತು ಶೂಲೆ — ೩ —

ಬೆಳ್ಳಿ ಹಣವ ಚೆಲ್ಲಿ ಖಾಲಿಯಾಯ್ತು ಪರ್ಸ ಮೂಲೆ
ಕೋಲುಸಖೀ ಚಂದ್ರಮುಖೀ ಕೋಲೆ ಹೊಟ್ಟೆಶೂಲೆ! ।ಅ. ಪ।

ರಜಪುಟಾಣದಿಂದ-ರಾಮೂ

"ರಾಮು ಬಂದ ಕಣೋ!"

"ರಾಮು ಬಂದಿದಾನಂತೋ"

"ರಾಮೂ, ರಾಮೂ, ರಾಮೂ, ರಾಮೂ" ಕ್ಲಬ್ಬಂತಾ ರಾಮು ಮಯ!

ರಾಮು ನಮ್ಮೂರಿನಿಂದ ವರ್ಗವಾಗಿದ್ದು ರಜಪುಟಾಣಕ್ಕೆ. ನಮ್ಮೂರು, ಭಾರತದಲ್ಲಿ ಒಂದಾದ ಫಲ. ರಾಮುವಿನ ವರ್ಗ. ನಮ್ಮೂರಿಗೆ ಸ್ವಾತಂತ್ರ್ಯ ಬಂದಿದ್ದು ಈ ರೀತಿಯಲ್ಲಿ. ಹೋದ ಮಹಾರಾಯ ಮೂರು ವರ್ಷವಾದ ಮೇಲೆ ಈಗಲೇ ಹಿಂತಿರುಗಿ ರಜಾದ ಮೇಲೆ ಬಂದಿದ್ದು. ಅಂದ ಮೇಲೆ ಊರವರ ಉತ್ಸಾಹ ಕೇಳಬೇಕೇ? — ಕ್ಲಬ್ಬಿನವರ ಕೋಲಾಹಲ ಕೇಳಬೇಕೇ?

* * *

ರಾಮು ಬಂದ.

ರಾಮೂನ ಕಂಡಿದ್ದೇ ತಡ! ಒಬ್ಬೊಬ್ಬರು ಒಂದೊಂದು ರೀತಿ ಪ್ರಶ್ನೆ ಕೇಳುಕ್ಕೆ ಶುರು ಮಾಡಿದರು.

ರಜಪುಟಾಣಾದಲ್ಲಿ ಮೊಷರಿಗೆ ಘೋಷಾ ಅಂತಲ್ಲೋ!"

"ರಾಜಾ ಮಾನ್ ಸಿಂಗ್ ಸಿಕ್ಕಿದನೇನೋ?"

"ಮಾನ್ ಸಿಂಗ್ ರಾಜಾ ಹೇಗಾದನೋ?"

"ಅಲ್ಲಿನ ಪೋಲೀಸಿನವರಿಗೆ ಇವರನ್ನು ಹಿಡಿಯಲು ಯಾಕೆ ಸಾಧ್ಯವಿಲ್ಲ."

"ಏನೋ? ರಾತ್ರಿಯಾದ ಮೇಲೆ ಹೊರಗೆ ತಲೆ ಇಟ್ಟರೆ ತಲೆ ಹೊಡೆದೇ ಬಿಡುತ್ತಾರಂತಲ್ಲೋ?"

"ಅಲ್ಲಿ ಹೆಣ್ಣು ಮಕ್ಕಳು ಹುಟ್ಟಿದರೆ, ಮಲಯಾಳಕ್ಕೆ ಮಾರುತ್ತಾರಂತಲ್ಲಾ! ದಿಟನೇ?"

"ಅಲ್ಲೆಲ್ಲಾ ಈಗಲೂ ಹೆಣ್ಣನ್ನ ಕನ್ನಡೀಲಿ ನೋಡಿ ಮದುವೆ ಮಾಡಿಕೋತಾ ರಂತೆ, ಹೌದೇ?"

* * *

ಟೈಪ್‌ರೈಟರ್ ನೋಡಿದ್ದೀರಲ್ಲವೇ! ಟಪ ಟಪ ಅಂತ ನಿಮಿಷಕ್ಕೆ ಎಂಭತ್ತು ಮಾತು ಕುಟ್ಟುವ ಭೂಪತಿ ಎದುರಿಗೆ ಕೂತರೆ ಆ ಟೈಪ್‌ರೈಟರಿಗೆ ಎಷ್ಟು ಹೆದರಿಕೆ ಆಗಬೇಕು? ಅಲ್ಲವೇ!

ಅಂತಹಾ ಟೈಪರ್ರೈಟರನ್ನೇ ರಾಮು ನಿಮಿಷಕ್ಕೆ ತೊಂಭತ್ತರಂತೆ ಬಾರಿಸುತ್ತಾನೆ. ಆ ಕಾರಣಕ್ಕಾಗಿಯೇ ಅವನನ್ನ ಅವನ ಆಫೀಸರು ತನಗೆ ವರ್ಗವಾದ ಪ್ರಯುಕ್ತ ಅವನನ್ನು ವರ್ಗಮಾಡಿಸಿ, ಹೆಚ್ಚು ಸಂಬಳ ಕೊಡಿಸಿ, ಬ್ರಹ್ಮಚರ್ಯಾಶ್ರಮಕ್ಕೆ ಕರೆದುಕೊಂಡು ಹೋಗಿದ್ದು.

ಅಂತಹ ಭೂಪ ಈ ರೀತಿ ನಿಮಿಷಕ್ಕೆ ಇಪ್ಪತ್ತು—ಕೇವಲ ಇಪ್ಪತ್ತು ಮಾತು ಗಳನ್ನು ಎದುರಿಸಲಾರನೇ? ಧೀರ! ಎಲ್ಲವನ್ನೂ ಕೇಳಿ ಎಲ್ಲರೂ ಸುಸ್ತಾದ ಮೇಲೆ ತಾನು ಷಾರ್ಟ್‌ಹ್ಯಾಂಡಿನಲ್ಲಿ ಮಾತನಾಡಿದ. ಉತ್ತರ ಕೊಟ್ಟ.

* * *

ಇಂದು ರಾಜಪುಟಾಣದ ಕೆಲವು ಸ್ಥಳಗಳಲ್ಲಿ ಸಂಜೆ ಆರು ಗಂಟೆ ಮೇಲೆ ತಲೆ ಹೊರಗೆ ಯಾರೂ ಹಾಕುವುದಿಲ್ಲ. ಹಾಗೆ ಹಾಕಿದರೆ ತಲೆ ಕೆಟ್ಟವರೇ ಹೌದು— ಅವರೂ ತಲೆ ಕಳೆದುಕೊಂಡೇ ಮನೆಗೆ ಬರುತ್ತಾರೆ.

ಇದೇನೂ ರಾಜಪುಟಾಣಾಕ್ಕೆ ಮಾತ್ರವಲ್ಲ. ನಮ್ಮೂರಿನಲ್ಲಿ ಕೂಡ ಕ್ಲಬ್ಬಿಗೆ ಸಂಜೆ ಆರು ಗಂಟೆ ಮೇಲೆ ಹೋದವರು ಮನೆಗೆ ಬರುವಾಗ ತಲೆ ಕಳೆದುಕೊಂಡೇ ಬರುತ್ತಾರೆ.

ಅಲ್ಲಿ ಮೊಸರಿಗೆ ಘೋಷಾ ಉಂಟು. ಇಲ್ಲದೇ ಇದ್ದರೆ ಸೊಳ್ಳೆ ನೊಣ ಎಲ್ಲಾ ಮುತ್ತುಕೊಡುತ್ತವೆ. ಕ್ರಿಮಿಗಳು ಮುತ್ತು ಕೊಟ್ಟ ಮೊಸರನ್ನು ಅಲ್ಲಿನವರು ಉಪ ಯೋಗಿಸ ವುದಿಲ್ಲ. ನಮ್ಮೂರಿನಲ್ಲಿ ಪರವಾಗಿಲ್ಲ ಅನ್ನುತ್ತಾರೆ ಅಲ್ಲಿ ಹಾಗೆ ಮಾಡಿ ದವನು ಇರಲಿಲ್ಲ ಎನ್ನಿಸುತ್ತಾರೆ.

ರಾಜಾ ಮಾನ್‌ಸಿಂಗ್ ಇನ್ನೂ ಸಿಕ್ಕಿಲ್ಲ. ಅವನು ಸಾಮಾನ್ಯ ಠಕಾಯಿತ. ರಾತ್ರಿ ವೇಳೆ ಸ್ನೇಹಿತರೊಂದಿಗೆ ಅಡ್ಡಕಟ್ಟಿ ಕಸಿದುಕೊಳ್ಳುತ್ತಾನೆ ಸಿಕ್ಕಿದ್ದನ್ನು ಹತ್ತಿರದ ಹಳ್ಳಿಯವರಿಗೆ ಅರ್ಧಂಭರ್ಧ ಹಂಚುತ್ತಾನೆ ಅದಕ್ಕೇ ಅವರೆಲ್ಲಾ ಅವನನ್ನು ರಾಜಾ ಅಂತ ಕರೆಯೋದು. ಎಷ್ಟೋ ಬಾರಿ ಅವನ ಪ್ರಾಣಕ್ಕೆ ಅಪಾಯ ಸಂಭವಿಸಿತ್ತು.

ಆದರೆ ನಮ್ಮೂರಿನ ರಾಜಾ ತೆರಿಗೆಸಿಂಗರರಿಗಿಂತ ಅವನು ಎಷ್ಟೋ ದೊಡ್ಡ ಮನುಷ್ಯ. ನಮ್ಮೂರಿನ ತೆರಿಗೆ ಸಿಂಗರು, ಹಗಲು ಹೊತ್ತಿನಲ್ಲೇ ನಮ್ಮ ದಾರಿಕಟ್ಟಿ ಎಲ್ಲಿ ಸುಂಕದ ಸಾಮಾನಿದೆಯೋ ಅಂತ ನಮ್ಮ ಜೇಬನ್ನೇ ಹುಡುಕುತ್ತಾರೆ. ಅವರು

ಆಡೋ ಆಟ ನೋಡಿದರೆ ಇವರೇ ರಾಜರೋ ಎನ್ನಿಸುತ್ತದೆ. ಇಂತಹವರಿಗಿಂತ ರಾಜಾ ಮಾನಸಿಂಗ್ ದಿಟವಾಗಲೂ ಮಾನಸ್ಥ, ಮರ್ಯಾದಸ್ಥ.

ಅಲ್ಲಿನ ಪೋಲೀಸಿನವರು ರಾಜಾ ಮಾನಸಿಂಗನನ್ನು ಹಿಡಿಯಲಾಗಲಿಲ್ಲ ದಿಟ! ಸರ್ಕಾರ ಅಲ್ಲಿನ ಪೋಲೀಸರಿಗೆ ಸಂಬಳ ಕೊಡುತ್ತದೆ. ಹೌದು! ಆದರೆ ಅದಕ್ಕೂ ಮಿಗಿಲಾದ ಪ್ರೀತಿ ಭತ್ಯವನ್ನು ರಾಜಾ ಮಾನಸಿಂಗ್ ಅವರಿಗೆ ಹಂಚುತ್ತಾನಂತೆ. ಇದಕ್ಕೆ ಸೋದರ ರಾಷ್ಟ್ರದ ಪಾಕೀಸ್ಥಾನೀಯರು ಶಾಮೀಲಂತೆ ಎಂದು ಭಾರತ ದಲ್ಲಿ ಪ್ರೀತಿ ಭತ್ಯ ಸಂಬಳಕ್ಕಿಂತ ಕಡಿಮೆಯಾಗುತ್ತದೋ ಅಂದು ರಾಜಾ ಮಾನ ಸಿಂಗ್ ನೇಣು ಹಾಕಿಕೊಳ್ಳುತ್ತೇನೆ ಎಂದು ಶಪಥ ಮಾಡಿದ್ದಾನೆ. ಆದಕ್ಕೇ ನಮ್ಮ ಸರ್ಕಾರ, 'ಭಾವೆಗಿಂತ ಕಜ್ಜಿ ಭಾರ' ಅಂದ ಹಾಗೆ ಸಂಬಳಕ್ಕಿಂತ ತುಟ್ಟಿ ಭತ್ಯ ಪ್ರೀತಿ ಭತ್ಯಾನ ಭಾರವಾಗಿರಿಸಿಟ್ಟಿದ್ದಾರೆ.

ಅಲ್ಲಿ ಹೆಣ್ಣುಮಕ್ಕಳು ಹುಟ್ಟೋದೇ ಇಲ್ಲ. ಮಲೆಯಾಳಕ್ಕೆ ಮಾರುತ್ತಾರೆ ಅನ್ನೋದು ಶುದ್ಧ ಸುಳ್ಳು. ಮಲೆಯಾಳದಲ್ಲಿ ಹುಟ್ಟಿದ ಹೆಂಗಸರಿಗೆ ಸಕಲ ಹಕ್ಕೂ ಇರೋವಾಗ ಬೇರೆ ಹೆಣ್ಣು ಮಕ್ಕಳನ್ನು ತಮ್ಮ ಜತೆ ಸ್ಪರ್ಧೆಗೆ ಏಕೆ ಕೊಳ್ಳುತ್ತಾರೆ? ಗಂಡು ಮಕ್ಕಳನ್ನು ಕೊಂಡುಕೊಳ್ಳುತ್ತಾರೆ ಅಂದರ ನಂಬಬಹುದು. ಆದರೆ ಹಾಗೆ ಯಾರೂ ಅನ್ನುವುದೇ ಇಲ್ಲ.

ಅಲ್ಲಿ ಮದುವೆಗೆ ಮುಂಚೆ ಹೆಣ್ಣನ್ನು ಕನ್ನಡೀಲಿ ನೋಡಿ ಮಾಡಿಕೊಳ್ಳುತ್ತಾರೆ ಅನ್ನೋದು ಶುದ್ಧ ಸುಳ್ಳು. ಅಲ್ಲಿ ಗಂಡಸರು ಹೆಂಗಸರು ಬೇರೆ ಬೇರೆಯಾಗಿ ಕನ್ನಡೀಲಿ ನೋಡಿಕೊಂಡು ನಂತರ ಮದುವೆಯಾಗುತ್ತಾರೆ. ನಮ್ಮೂರಿನಲ್ಲಿ ಆದ ಹಾಗೆ."

ನಿಮ್ಮ ಮಾತನ್ನೆಲ್ಲಾ ಕೇಳಿದ ಮೇಲೆ ಅಲ್ಲಿಗೆ ಬೇಗ ಹೋಗೋಣ ಆ ಊರೇ ಚೆನ್ನ ಎಂದು ಹೇಳಿ ಒಂದೇ ಉಸುರಿಗೆ ರಾಮು ಹೊರಟೇ ಹೋದ, ಕ್ಲಬ್ಬಿನಿಂದ.

—o—

ಹಾದಿಯಲ್ಲಿ ಕೇಳಿಸಿದುದು

ಮನೆಯಾತ :—ಲೋ ಬೋರಾ—ಏನೋ ಅದು ರಾದ್ಧಾಂತ? ನಿನ್ನೆ ರಾತ್ರಿ ನೀನು ವಿಪರೀತ ಕುಡಿದು ಜ್ಞಾನವಿಲ್ಲದೆ ಆ ದೊಡ್ಡ ದೊಂಬೇನ ತಲೆಯ ಮೇಲೆ ಹೊತ್ತು ಮನೆ ಸುತ್ತ ಓಡಾಡ್ತಿದ್ದಿಯಂತೆ—ಹೌದೇನೋ?

ಬೋರ :—ಔದ್ರು ಬುದ್ಧೀ.

ಮನೆಯಾತ :—ನಾನೆಲ್ಲಿದ್ನೋ ಆಗ?

ಬೋರ :—ಆ ದೊಂಬೆ ಒಳೀಗೇ ಕುಂತಿದ್ರಿ ಬುದ್ಧೀ.

ಆರಾಸೆಯ ಒಸಗೆ

(ಮುಂದುವರಿದುದು)

ಲೋಕಕ್ಕೆ ಬಂದೆ ನಾನ್, ಏಕೆ? ನಾನದನರಿಯೆ.
ಚೇಳುಕೊಂಡಿಗೆ ವಿಷವದೇಕೆ ಬಂತು?
ಪೋಪೆ ನಿಲ್ಲಿಂ ನಾನು; ಎಲ್ಲಿಗೋ? ಅದನರಿಯೆ.
ಸಿಗರೇಟು ಹೊಗೆಯವೊಲು ಹಾರಿಹೋಗುವೆನು. — ೧ —
ಜಲಜನಕ ಬಾಂಬು ಸಿಡಿವುದು, ಸಿಡಿದು ಸುಡುವುದದು
ನೆಹರು--ಯೂನುಗಳದನು ತಡೆದು, ಹಿಡಿದು
ನಿಲಿಸಲಾರರು. ಡಾಕ್ಟರಪ್ಪನ್ನೀಮರನವನು ತಡೆಯುವನೆ?
ಕಾದು ನಿಂತಿಹನಾ ಮೆಕಾರ್ಥಿ! — ೨ —
ಪಂಚವಾರ್ಷಿಕ ಯೋಜನೆಯವ್ಯೋಮದಡಿಯಲ್ಲಿ
ತೆವಳುತ್ತ ಬದುಕಿ ಕಡೆಗೊಮ್ಮೆ ಸುಸ್ತಾಗಿ
ಹೊರಳುವೆವು. ಸರ್ಕಾರ? ಅದನಂಬಿ ಫಲವೇನು?
ವೋಟು ರೆಡ್ ಟೇಪುಗಳು ಅದನು ಬಿಗಿದಿಹವು — ೩ —
ನಟಿಯು ಅಭಿನಯಿಸುವಳು ಶೀಲವೊ, ಅಶೀಲವೋ
ಡೈರೆಕ್ಟರನು ಹೇಳಿದಂತೆ ಕುಣಿಯುವಳು.
ಸಿನಿಮಕ್ಕೆ ಪಾಸ್‌ಕೊಡು ಸೆನ್ಸಾರಿನವನರಿವ
ಬಾಲರಿಗೊ? ಯುವಕರಿಗೊ? 'A'ಯೊ? ಎಲ್ಲರಿಗೊ? — ೪ —
ಸಿನಿಮಸ್ಕೋಪನು ತಂದು ವಿಸ್ಟವಿಷನನು ಹರಿಹಿ
ಗ್ರಿಗರಿ, ರಿಟ, ನಿಮ್ಮಿಯವರ ಟೆಕ್ನಿಕಲರಿದನೇ.
ಮಗು ನಾನು ಮುಗ್ಗುರಿಸಿ ಸಿನಿಮ ಜಾಲಕೆ ಸಿಲುಕೆ
ಸಿಗಿಸು ಹಾಕುವೆನೆಂದು ಬೆದರಿಸುತಲಿಹೆಯಾ? — ೫ —
ಹಾರಾಡಲೀಲೋಕ, ಸಖಿಯೆ ಎನ್ನೊಡನೆ ಬಾ!
ಜಾರುತಿರುವೀಲೋಕ ಜಾರಿಬಿಡಲಿ.
ಸಾರಿ ಮೂಲೆಯ ನೊಂದ ತಾಲಿಪಿಟ್ಟನು ತಿಂದು
ಹೀರಿ ಕಾಫಿಯ ಸೊಗವನನುಭವಿಸುವ — ೬ —

— ಆ. ರಾ. ಸೇ.

ಯಾತ್ರಿಕರ ಪತ್ರ

೮೩

ನಾವು ಚಂದಾಪುರವನ್ನು ಸುರಕ್ಷಿತವಾಗಿ ಸೇರಿದೆವು. ರಾಜ ತುಸದೂರ ಹಿಂದೆಯೇ ನಡೆದುಬಂದ. ಕಿರಲುಕೋಡು ಪಟೇಲರ ಆಳಿನ ಶಿಫಾರಸಿನಮೇಲೆ ಚಂದಾಪುರದ ದಾನಪ್ಪನವರ ಭೇಟಿಯಾಯ್ತು. ಅವರು ನಮ್ಮನ್ನು ದೊಡ್ಡಮನುಷ್ಯ ರೆಂಬ ಭಾವನೆಯಿಂದಲೇ ಸ್ವಾಗತಿಸಿದರು. ಉಭಯಕುಶಲೋಪರಿಗಳಾದಮೇಲೆ ಹರಟೆಗೆ ಕುಳಿತೆವು. ದಾನಪ್ಪನವರು ಬೆಳೆದ ಹಣ್ಣು ಹಂಪಲುಗಳು ನಮ್ಮ ಹರಟೆಗೆ ರುಚಿಯನ್ನು ಕೊಟ್ಟವು. ನಾವು ಚಂದಾಪುರದ ಅನಾನಸ್ ತಿನ್ನುತ್ತಿದ್ದಾಗ, ರಾಜ, ನಮ್ಮ ಹಿಂದಿನ–ಅಂದರೆ–ಮಾಧುಮನೆಯಲ್ಲಿ ಅನಾನಸ್ ಡಬ್ಬ ಒಡೆದ ಸಂಭ್ರಮವನ್ನು ಜ್ಞಾಪಿಸಿದ. ರಾಜ ಚಂದಿ ಇಬ್ಬರೂ ಘೊಳ್ಳೆಂದು ನಕ್ಕರು.

"ಏನು ಸಮಾಚಾರ?" ಅಂದರು ದಾನಪ್ಪನವರು. ಹಿಂದಿನ ಕಥೆಯನ್ನು ಅವರಿಗೆ ಹೇಳಿದ್ದಾಯಿತು. ದಾನಪ್ಪನವರು ನಗಲಿಲ್ಲ–ಹುಬ್ಬುಗಂಟು ಹಾಕಿದರು.

"ಆ ಡಬ್ಬ ಎಲ್ಲಿ ತಯಾರಾದದ್ದು?" ಎಂದರು.

"ನಮ್ಮ ದೇಶದ್ದೇ–ಸ್ವದೇಶಿ!" ಅಂದ ಚಂದಿ ಜಂಬದಿಂದ.

"ಶುದ್ಧ ಅವಮಾನ!" ಅಂತ ತೀರ್ಪುಕೊಟ್ಟರು.

ಆ ಕ್ಷಣವೇ ತಮ್ಮ ಜವಾನನನ್ನು ಕರೆದು ಹೇಳಿದರು— "ಶೀನಾ–ಹೋಗಿ ನನ್ನ ಸಂದೂಕಿನಮೇಲೆ ಇರೋ ಹಾಲಿನಪುಡಿ ಡಬ್ಬಾನ ತಕೊಂಡುಬಾ" ಅಂದರು.

ಹಾಲಿನಡಬ್ಬ ಬಂತು.

ದಾನಪ್ಪನವರು ನಮ್ಮಕಡೆ ತಿರುಗಿ "ನೋಡಿ ಈ ಡಬ್ಬ ವಿಲಾಯತೀದು. ಇದನ್ನು ತೆಗೀತೇನೆ ನೋಡಿ ಎಷ್ಟು ಸುಲಭ!– ಲೋ ಶೀನಾ–ಆ ಚಾಕು– ಹೋಗಲಿಬಿಡು – ನನ್ನ ಬೀಗದಕೈ ಸಾಕು" ಅಂತ ಹೇಳಿ ತಮ್ಮ ಗೊಂಚಲಿನ ಒಂದು ಬೀಗದಕೈನಿಂದ ಆ ಡಬ್ಬದ ಮುಚ್ಚಳವನ್ನು ಎತ್ತಿ, ಮುಚ್ಚಳದ ಕೆಳಗಿದ್ದ ತಗಡಿನ ಅಂಚಿನಲ್ಲಿ ಅವುಕಿ ಆ ತಗಡನ್ನೂ ಸುಲಭವಾಗಿ, ಪೂರ್ತಿಯಾಗಿ ಎತ್ತಿದರು. ದಾನಪ್ಪ ನವರು, ಅವರ ಬೀಗದಕೈ, ಹಾಲಿನ ಡಬ್ಬ, ಹಾಲಿನಪುಡಿ, ಶೀನ ಮತ್ತು ನಾವು— ಎಲ್ಲಾ ಸುರಕ್ಷಿತವಾಗಿದ್ದದ್ದು ನೋಡಿ ನಾನು ಬೆರಗಾದೆ.

"ಸ್ವತಂತ್ರ ಬಂದು ಏಳೆಂಟು ವರ್ಷವಾದರೂ ಪ್ರಾಣಾಪಾಯವಿಲ್ಲದೆ ತೆಗೆಯುಕ್ಕೆ ಆಗದ ಒಂದು ತಗಡಿನ ಡಬ್ಬ ಮಾಡುಕ್ಕೆ ಯೋಗ್ಯತೆ ಇಲ್ಲಾಂದ್ರೆ–ಬಿಡೀ ಸ್ವಾಮಿ– ನಾಚಿಕೆ ಕೇಡು" ಅಂದರು.

ನಮ್ಮ ಮನಸ್ಸಿಗೂ ನೆಮ್ಮದಿಯಾಯ್ತು. ಇದುವರಿವಿಗೂ ನಮ್ಮನ್ನು ನಾವೇ ಶಪಿಸಿಕೊಂಡಿದ್ದೆವು: ಈಗ ಆ ಡಬ್ಬದ್ದೇ ತಪ್ಪು ಅಂತ ಅರ್ಥವಾಯಿತು.

"ಇದರ ಪರಿಣಾಮವೇನು ಗೊತ್ತೊ? ನೀವೇ ಆಗಲಿ ನಾನೇ ಆಗಲಿ— ಆ ಹಣ್ಣಿನ ಡಬ್ಬವನ್ನು ಪುನಹ ಮುಟ್ಟೊಲ್ಲ. ನಮ್ಮ ದೇಶದ ಸಾಮಾನು—ನಾವು ಎಷ್ಟೇ ದೇಶಾಭಿಮಾನಿಗಳಾಗಿರಲಿ—ನಾವು ಕೊಟ್ಟ ಹಣಕ್ಕೆ ಸರಿಯಾದ ಸುಖವಿಲ್ಲ ದಿದ್ದರೆ–ವಿಲಾಯತೀ ಸಾಮಾನೇ ಕೊಳ್ಳುವಂತಾಗುತ್ತೆ" ಅಂದರು ದಾನಪ್ಪನವರು.

ಇದೊಂದು ಚಿಕ್ಕ ವಿಷಯ. ಪ್ರತಿಯೊಂದು ವಿಷಯಗಳಲ್ಲಿಯೂ ಇದೇ ನ್ಯಾಯ ಕಂಡುಬಂತು.

ದಾನಪ್ಪನವರು ಪುನಃ ಷುರು ಮಾಡಿದರು.

"ನೋಡೀ—ನೀವು ದೇಶವೆಲ್ಲಾ ತಿರುಗಿದವರು. ನಾನು ಇಲ್ಲೇ—ಇದೇ ಹಳ್ಳಿಯಲ್ಲಿ ಇದುವರಿಗಿನ ಜೀವಮಾನವನ್ನು ಕಳೆದಿರುವವ. ಆದರೂ ನಿಮ್ಮಂತಹವರು ಇಲ್ಲಿಗೆ ಬಂದು ಹೋಗಿ ಆಗಾಗ ನಡೆದಿರುವ ಚರ್ಚೆಗಳಿಂದ ನನಗೆ ತುಸ ಹೊರಗಿನ ವಿಚಾರ ತಿಳಿದಿದೆ. ಹೀಗಾಗಿ ನನ್ನ ಸ್ವಂತ ಕೆಲವು ಭಾವನೆಗಳನ್ನು ನಿಮಗೆ ಹೇಳ್ತೀನೆ. ನಮ್ಮ ದೇಶದಲ್ಲಿ ಗೃಹ ಕೈಗಾರಿಕೆ ಹೆಚ್ಚಾಗಬೇಕು; ಅಂದರೆ— ಇದೇನು? ಎಲ್ಲರೂ ಹೇಳುವ ವಿಷಯ ಕಿವಿಯಲ್ಲಿ ಹೇಳ್ತೀನೆ ಅನ್ನಬೇಡಿ. ಸಣ್ಣ ಸಣ್ಣ ಸಾಮಾನುಗಳಿಂದ ಹಿಡಿದು ದೊಡ್ಡ ದೊಡ್ಡ ಕೈಗಾರಿಕೆಗಳು ಕೂಡ ಗೃಹ ಕೈಗಾರಿಕೆ ರೂಪವಾಗಬೇಕು. ಈಗ ನೋಡಿ—ಒಂದು ಕಾರು, ಒಂದು ಪಂಪು, ಒಂದು ಗಡಿಯಾರ—ಇವುಗಳ ಒಂದೊಂದು ಭಾಗವೂ ಮನೆಗಳಲ್ಲಿ, ಹಳ್ಳಿಗಳಲ್ಲಿ ತಯಾರಾಗಿ, ಅವುಗಳ ಜೋಡಣೆ ಮಾತ್ರ ಕಂಪೆನಿಗಳಲ್ಲಾಗಬೇಕು. ಇದರಿಂದ ಬೇಕಾದಷ್ಟು ಅನುಕೂಲಗಳುಂಟು—ಹೇಗೆಂದರೆ ಈಗಿನ ಹಾಗೆ ಕಾರ್ಖಾನೆಗಳು ಹಳ್ಳಿಗಳಿಂದ ಜನರನ್ನು ಸೆಳೆಯುವುದು ತಕ್ಕಮಟ್ಟಿಗೆ ಕಡಿಮೆಯಾಗುತ್ತೆ. ಹಳ್ಳಿಗಳು ಉದ್ಧಾರವಾಗುತ್ತವೆ ಜನಗಳಲ್ಲೂ ಉತ್ಸಾಹ ಹೆಚ್ಚಿ ಈಗಿರುವ ತಾರತಮ್ಯಗಳು ಹೋಗುತ್ತವೆ. ಮೇಲಾಗಿ ಈ ನೆಪದಲ್ಲಿ ಹಳ್ಳಿಗಳಿಗೆ ಸಂಚಾರ ಮತ್ತು ಅಂಚೆ ಸೌಕರ್ಯ ತಾನಾಗಿ ಹೆಚ್ಚುತ್ತೆ" ಅಂದರು.

ಆಗ ಚಂದಿ "ಅದೇನೋ ನಿಜ ಕಣ್ರೀ—ನೋಡಿ ತಮಟೆಗೆರೆ ಅಂತ—ಅಲ್ಲಿ ನಮ್ಮ ನೆಂಟರಿದ್ದಾರೆ. ಅಲ್ಲಿಗೆ ಒಂದು ಪೋಸ್ಟು ಹೋಗಬೇಕಾದರೆ ಎರಡು ವಾರ ಬೇಕು" ಅಂದ.

ನಾನು ಸುಮ್ಮನಿದ್ದೆ. ರಾಜ ನನ್ನನ್ನು ನೋಡಿದ.

ದಾನಪ್ಪನವರೇ ಪುನಃ ಶುರು ಮಾಡಿದರು. ನೀವು ಏನೇ ಹೇಳಿ—ಪ್ರತಿಯೊಂದು ಹಳ್ಳಿಗೂ ಸಂಪಾದನೆ—ಆದಾಯವಿರಬೇಕು. ಹೇಗೆ ಅಂದರೆ ಪ್ರತಿಯೊಂದು ಹಳ್ಳಿಯಲ್ಲೂ ಒಂದು ಪದಾರ್ಥ—ಆಹಾರ ಪದಾರ್ಥವೇ ಆಗಲಿ ಅಥವಾ ಒಂದು ಆಟದ ಗೊಂಬೆಯೋ ಆಗಲಿ—ಹೊರಗೆ ಮಾರುವಂಥಾದಾಗಬೇಕು. ನಮ್ಮ ದೇಶದಲ್ಲಿ ಒಂದೊಂದು ಜಾಗದಲ್ಲಿ ಒಂದೊಂದು ವಿಚಿತ್ರವಿರುತ್ತದೆ. ಅದನ್ನೇ ಉಪಯೋಗಿಸಿಕೊಂಡು ದೇಶದ ಸಂಸಾರದಲ್ಲಿ ನೆರವಾಗಬೇಕು...."

"ಅಂದರೆ?" ಅಂತ ಕೇಳಿದ ರಾಜ ಮಧ್ಯದಲ್ಲಿ.

"....ಅಂದರೆ—ನೋಡಿ ನಮ್ಮ ದೇಶದಲ್ಲಿ ದಟ್ಟವಾದ ಕಾಡುಗಳಿವೆ. ಆ ಕಾಡಿನಲ್ಲಲ್ಲದೆ ಪಟ್ಟಣಗಳಲ್ಲಿ ಫಾರೆಸ್ಟು ಕಾಲೇಜಿದ್ದೇನು ಪ್ರಯೋಜನ? ಅಥವಾ ಆಗುಂಬೆ – ಅಸ್ಸಾಂ—ಚಿರಾಪುಂಜಿ—ಮಳೆ ವಿಪರೀತವೆಂದು ಹೆಸರುವಾಸಿ. ಆದರೂ ಅಲ್ಲಿ ಉಪಯೋಗಿಸೋ ಛತ್ರಿ, ಕಂಬಳಿಗಳು ಮರುಭೂಮಿಯಲ್ಲಿರೋ ಪಟ್ಟಣಗಳಲ್ಲಿ ತಯಾರಾದವು! ಒಳ್ಳೆ ಬ್ಯಾಂಡೇಜು ಬಟ್ಟೆ ಇದ್ದ ಹಾಗಿರುತ್ತವೆ! ಒಟ್ಟಿನಲ್ಲಿ ನಾನು ಹೇಳೋದೇನಂದ್ರೆ ಈ ವಿಧವಾಗಿ ಹವಾಗುಣಗಳಿರುವ ಕಡೆಯಲ್ಲೇ ಅದನ್ನು ತಡೆಯಬಲ್ಲ ಸಲಕರಣೆಗಳಾಗುವಷ್ಟು ಮಟ್ಟಕ್ಕೆ ಬರಬೇಕು. ಅಲ್ಲಿಗೆ ನಮ್ಮ ಹಳ್ಳಿಗಳು, ಊರುಗಳು ಮತ್ತು ದೇಶವೇ ಮುಂದುವರಿದಿದೆ ಅಂತ" ಅಂದರು.

"ಹೌದು ಕಣೋ—ಆಗುಂಬೇಲಿ ತಯಾರಾದ ಛತ್ರೀನ ಬಳ್ಳಾರೀಲಿ ಹಿಡಿದರೆ ಅಲ್ಲಿ ಮಳೆಯೇ ಬೀಳುಲ್ಲ!" ಅಂದ ಚಂದಿ.

ತುಸ ಹೊತ್ತು ರಾಜಕೀಯದ ಮಾತಾಡಿ ಚಂದಾಪುರ ಬಿಟ್ಟೆವು. ನನ್ನ ತಲೆಯಲ್ಲಿ ದಾನಪ್ಪನವರು ಹೇಳಿದ ಅಭಿಪ್ರಾಯಗಳೇ ತುಂಬಿದ್ದವು.

ರಾಜ ಕೂಡ "Very Constructive Ideas" ಅಂತ ಒಪ್ಪಿದ.

ಚಂದಿ—"ಎಲ್ಲಕ್ಕೂ Co-operative effort ಬೇಕು ಕಣ್ರೋ" ಅಂದ.

ರಾಜ ಅದಕ್ಕೆ ಹೇಳಿದ—"ಅದೇ ಕಣ್ರೋ– ನಮ್ಮ ಜನಕ್ಕೆ ಇನ್ನೂ ಬುದ್ಧಿ ಬಂದಿಲ್ಲ. ಊರಲ್ಲಿ ಒಂದು ತೇರು, ಜಾತ್ರೆ, ದಾಸರ ಕುಣಿತ ಅಂದರೆ ನುಗ್ಗುತ್ತಾರೆ—ಸಂತರ್ಪಣೆಗೆ ನುಗ್ಗಿದ ಹಾಗೆ ಜನ. ಆದರೆ ತಮ್ಮ ಹಳ್ಳಿಗಾಗಿ- ಒಂದು ಚರಂಡಿ—ಕಡೆಗೆ ದೇವಸ್ಥಾನದಲ್ಲೇ ದುರ್ವಾಸನೆ ಹೊಡೆಯೋ ಚರಂಡೀನ ನಾಲ್ಕು ಜನ ಸೇರಿ ಮುಚ್ಚೊಲ್ಲ. ಐದಾರು ಮಕ್ಕಳು, ಹತ್ತು ಹನ್ನೆರಡು ಮುದುಕರು, ಜೊತೆಗೆ ಕೆಲವು ಜಾನುವಾರುಗಳು ಆ ಚರಂಡೀಲಿ ಬಿದ್ದು ಪೆಟ್ಟು ತಿಂದ ಮೇಲೆ ಒಬ್ಬೊಬ್ಬರಾಗಿ ಅರ್ಜಿ ಬರೆಯುತ್ತಾರೆ—ಮಂತ್ರಿಗಳಿಗೆ. ಕಡೆಗೆ ಮಂತ್ರಿಗಳಲ್ಲಿಗೆ ಜಾಥಾಗಳು ಹೋಗಿ,

ಅವರ ತಲೆ ಕೆಡಿಸಿ—ಮುಂದಿನದೋ ಅಥವ ಅದರ ಮುಂದಿನದೋ ಪಾಂಚವಾರ್ಷಿಕ ಯೋಜನೆಯಲ್ಲಿ ಆ ಚರಂಡಿಯ ಇತ್ಯರ್ಥವನ್ನು ಸೇರಿಸುತ್ತಾರೆ. ಈ ಮಧ್ಯದಲ್ಲಿ ಆ ಚರಂಡಿ, ಕೈಯಿಂದ ಕೈಯಿಗೆ, ಕಛೇರಿಯಿಂದ ಕಛೇರಿಗೆ ಓಡಾಡಿ—ಕಡೆಯಲ್ಲಿ ಇತ್ಯರ್ಥವಾಗುವ ಬಗೆ ಗೊತ್ತೋ?—"ಆ ಚರಂಡಿಗೆ ಒಂದು ಅಣೆಕಟ್ಟು ಅಥವಾ ಸೇತುವೆ ಆಗಬೇಕು" ಅಂತ. ಈ ಠರಾವು ಪುನಃ ಮಂತ್ರಿಗಳಿಂದ ಕೆಳಗೆ ಪ್ರಯಾಣ ಬೆಳಸಿ ಊರಿನ ಮೇಸ್ತ್ರಿಗೆ ತಲುಪುತ್ತೆ—ಆದರೆ ದೇವಸ್ಥಾನದ ಒಳಗಡೆ ಸೇತುವೆ ಇಡೋಕೆ ಜಾಗವಿಲ್ಲದೆ ಜನ ಕೈ ಕೈ ಹಿಸುಕಿಕೊಳ್ತಾರೆ" ಅಂತ.

"ಅರ್ಜಿ ಗುಜರಾಯಿಸದೆ ಇದ್ದೋರು ವಿನಾಶೆ ತಿರುವುತ್ತಾರೆ" ಅಂತ ಸೇರಿಸಿದ ಚಂದಿ.

ತಲಕಾಡಿನ ದಾರಿ ಹಿಡಿದೆವು.

—"ಕೇಫ"

ಪೂರ್ವ ದಿಗಂತದಿ ನೇಸರು ಮೂಡುವ
ಕ್ಷಣದಲ್ಲೇ ಎದ್ದು,—
ಆಗೊ! ಕಿಟಕೀ ಸಂದಿಲಿ ತೂರಿ ಬರುವ ಆ
ಬಿಸಿಲೆಂಥ ಮುದ್ದು!—
ಆಹ! ಬಾಂದಳವೆಲ್ಲ ಬಣ್ಣ ಬಣ್ಣದಾ
ಮಾಟದ ರಂಗೋಲಿ!—
ಅದನೇ ನೋಡುತ ಹಾಸಿಗೆಯಲ್ಲೇ
ಮಲಗುವೆ! ನಾ ಪೋಲಿ!

— ರುದ್ರಪ್ಪ.

ಕ್ರಿಕೆಟ್ ನೋಟಗಾರನ ಸಾಹಸ

ಸಾಮಾನ್ಯವಾಗಿ ಕ್ರಿಕೆಟ್ ಆಟಗಾರರನ್ನು ಕುರಿತ ಸಾಹಿತ್ಯವೇ ಬಹಳ. ಆಟದ ಅಂಕಿ ಅಂಶಗಳು, ಅವರು ಗಳಿಸಿದ ರನ್ನುಗಳು, ಬೀಳಿಸಿದ ವಿಕೆಟ್ಟುಗಳು, ಬಿಟ್ಟ ಕ್ಯಾಚುಗಳು, ತೊಟ್ಟ ಸ್ವೆಟರುಗಳು, ಇವೇ ಜಗದಾದ್ಯಂತ ಪಸರಿಸಿ, ಕ್ರೀಡಾಭಿಮಾನಿಗಳ ಕುತೂಹಲವನ್ನು ಕೆರಳಿಸುತ್ತಿರುವುದು.

ಆದರೆ, ನೋಟಗಾರರಿಲ್ಲದಿದ್ದರೆ, ಆಟಗಾರ ಕೇವಲ ವನಸುಮ! ನೋಟಗಾರರ ಸಾಹಸವೂ ಮೆಚ್ಚತಕ್ಕದ್ದೇ. ಬ್ಯಾಟ್ ಹಿಡಿದ ದಿನದಿಂದಲಾಗಾಯ್ತು ತಹಲ್‌ವರೆಗೂ ೧೦,೦೦೦ ರನ್ನುಗಳನ್ನು ಗಳಿಸಿದ ಪ್ರಚಂಡ ಧಾಂಡಿಗನನ್ನು ಎಲ್ಲರೂ ಭುಜಕ್ಕೇರಿಸುತ್ತಾರೆ. ಆದರೆ, ಕ್ರಿಕೆಟ್ ಆಟ ನೋಡಲು ಪ್ರಾರಂಭಮಾಡಿದಾಗಿನಿಂದ ತಹಲ್ ವರೆಗೂ ತಿಂದ ಕಡಲೆಕಾಯಿ ಅಳತೆ ೧೯೦ ಪಲ್ಲಾ ಆದ ನನ್ನನ್ನ....?

ಹೌದು! ಅಂಥ ಭೂಪತಿ, ಇಗೊ! ನಿಮ್ಮ ಎದುರಿಗೆ ನಿಂತಿರುವ ಈ ದಾಸಾನುದಾಸ ನನ್ನ ಈ ದಂತಬಲ, ಕಂಠಬಲ, ಜಠರಬಲ ಕ್ರೀಡಾಭಿಮಾನ, ಅದರ ಮೇಲ್ಮೆ, ಇವುಗಳನ್ನು ತಿಳಿದು, ಹಲವಾರು ಪತ್ರಿಕಾಪ್ರತಿನಿಧಿಗಳು ನನ್ನಲ್ಲಿಗೆ ಧಾವಿಸಿದರು

೧. "ಸ್ವಾಮಿ! ಈ ರೆಕಾರ್ಡ್ ಗಳಿಸಿದಾಗ ನಿಮ್ಮ ಮನೋಭಾವ ಹೇಗಿತ್ತು?" ಎಂದರು.

"ಸಂದೇಹವೇನು? ಸಂತೋಷ! ಆತ್ಮತೃಪ್ತಿ. ಕ್ರಿಕೆಟ್ ಇತಿಹಾಸದಲ್ಲಿ ಯಾರೂ ಸಾಧಿಸದ ಈ ಮಹತ್ಕಾರ್ಯವನ್ನೆಸಗಿದುದಕ್ಕಾಗಿ, ನಾನು ೧೦೦ನೆಯ ಪಲ್ಲಾದ ಕಟ್ಟಕಡೆಯ ಕಡಲೆಕಾಯನ್ನು ನುಂಗುವಾಗ, ಭಗವಂತನಿಗೆ ನನ್ನ ಅನಂತ ನಮಸ್ಕಾರಗಳನ್ನು ಸಲ್ಲಿಸಿದೆ".

೨. "ಇದರಲ್ಲಿ ನಿಮಗೆ ನೆರವಾದವರು ಯಾರಾದರೂ ಇನ್ನೂ ಜೀವಂತರಾಗಿದ್ದಾರೆಯೇ? ಅವರನ್ನು ನೀವು ಸ್ಮರಿಸಲು ಇಚ್ಛಿಸುವುದಿಲ್ಲವೆ?"

"ಅಂತಹ ಕೃತಘ್ನನೆ ನಾನು? ಮೊತ್ತಮೊದಲು ನಾನು "ಮೇಷ್ಟರಿಗೆ" ವಂದನೆಯನ್ನರ್ಪಿಸಬೇಕು. ಅವರೇ ನನ್ನನ್ನ ಮೊದಲು ಹುರಿದುಂಬಿಸಿ, 'ಓ, ಸಾರಥಿ, ಕ್ರಿಕೆಟ್ ಫೀಲ್ಡಿಗೆ ನುಗ್ಗೋ, ಹೇಗಾಡುತ್ತಾರೆ ನೋಡೋ, ಬಾಯಿಬಿಟ್ಟು

ಕೊಂಡು ಕೂರಬೇಡ, ನೋಡುತ್ತಾ ನೋಡುತ್ತಾ ತುಂಬಿಕೊ, ಹೇಗಾದರೂ ಹೆಸರು ಗಳಿಸೋ, ರಿಕಾರ್ಡ್ ಬ್ರೇಕ್‌ಮಾಡೊ,' ಎಂದು ಹೇಳಿದ್ದು. ಎರಡನೆಯದಾಗಿ, ನನಗೆ ಕಡಲೆಕಾಯಿ ಸಾಲವಾಗಿ ಸಪ್ಲೈಮಾಡಿದ ವರ್ತಕ ಶಿಖಾಮಣಿಗಳಾದ...."

"ಅದಿರಲಿ! ಆ ಸಾಲವನ್ನು ಹೇಗೆ ತೀರಿಸುತ್ತೀರಿ?"

"ಅವರ ಹೆಸರನ್ನು ಪ್ರಕಟಿಸದೆ ಮುಚ್ಚಿಡುವುದರಿಂದ"

"ಹಾಗೆ ಮಾಡಿದರೆ ಅವರಿಗೇನನುಕೂಲ?"

"ಇತರ ರಿಕಾರ್ಡ್ ಬ್ರೇಕುಗಳು ಅವರನ್ನು ಸಾಲಕ್ಕಾಗಿ ಪೀಡಿಸುವುದಿಲ್ಲ"

೩. "ಕ್ರಿಕೆಟ್ ಆಟ ನೋಡುವಾಗ, ಕಡಲೆಕಾಯನ್ನು ಹೇಗೆ ತಿಂಬುವುದು? ನಿಮ್ಮ ಅನುಭವದಿಂದ ಇತರೇ ಸೇಂಗಾ ಭಕ್ತರಿಗೆ ನೀವು ಯಾವುದಾದರೂ ಸಲಹೆ ಕೊಡಲು ಇಚ್ಛಿಸುವಿರಾ?"

"ಇಚ್ಛಿಸದೆ ಏನು? ಓವರ್ ಮುಗಿದು ಮತ್ತೊಂದು ಓವರಿಗೆ ಸಿದ್ಧವಾಗುವುದ ರೊಳಗೆ, ಮುಂದಿನ ಓವರಿಗಾಗುವಷ್ಟು ಕಾಯನ್ನು ಬೇಗ ಬೇಗ ಸುಲಿದಿರಿಸಿಕೊಳ್ಳು ವುದೊಳ್ಳೆಯದು. ಸ್ಲೋ ಬೌಲರೂ ಆಗಿ, ಫೀಲ್ಡರುಗಳು ಮಂದಗತಿಯವರೂ ಆಗಿ ದ್ದರೆ, ೩೨ಕಾಳು ಬೇಕಾಗುತ್ತದೆ. ಹಲ್ಲಿಂದ ಕಚ್ಚಿ ಸಿಪ್ಪೆ ಸುಲಿದು, ತಿನ್ನುವುದು ಲೀಗ್ ಮ್ಯಾಚುಗಳಿಗೆ ಮಾತ್ರ ಲಾಯಕ್ಕು. ಹೊರದೇಶದ ಟೀಮುಗಳು ಬಂದಾಗ, ೩೨ ಕಾಳನ್ನೂ ಒಟ್ಟಿಗೆ ದವಡೆಯಲ್ಲಿರಿಸಿ, ಒಂದೊಂದಾಗಿ ಈಚೆಗೆ ತೆಗೆದು ಅಗಿಯು ವುದೇ ಕ್ರಿಕೆಟ್.

೪. "ಆಮೇಲೆ?"

ಆಮೇಲಿನ್ನೊಂದು. ಕ್ರಿಕೆಟ್ ಬಯಲು ಅಂಚಿನಲ್ಲಿ ಪದ್ಮಾಸನಹಾಕಿ ಕೂತ ನೋಟಗಾರ, ಕಾಳನ್ನು ಬಾಯೊಳಕ್ಕೆ ನೆಲಮಟ್ಟದಿಂದಲೇ ಎಸೆದುಕೊಳ್ಳಬೇಕು. ಕೈ ತುಂಬ ಮೇಲೆ ಬಂದರೆ, ಆಟದ ನೋಟದ ಸ್ವಾರಸ್ಯ ಕಮ್ಮಿ. ಒಂದುಸಲ, ರಾಂಸಿಂಗ್ ಬ್ಯಾಟುಮಾಡುತ್ತಿದ್ದಾಗ,

೫. ಸಾಕು! ಸಾಕು! ಗೊತ್ತಾಯಿತು! ಕಡಲೆಕಾಯಿಪಿತ್ತ ಎನ್ನುತ್ತಾರಲ್ಲಾ?"

"ಹೌದು, ಪಿತ್ತವೆ! ಬೆಲ್ಲವನ್ನೂ ಅದರೊಂದಿಗೆ ಸೇರಿಸಿ ತಿಂದರೊಳ್ಳೆಯದು. ಎಂದು ಕೆಲವರು ನನಗೆ ಸಲಹೆ ಇತ್ತರು ನಾನೊಪ್ಪಲಿಲ್ಲ. ಪಿತ್ತವಾದರೆ ಪಿತ್ತ, ಅನುಭವಿಸಬೇಕು. ಆಟಗಾರರು ನಮಗಾಗಿ ಅಲ್ಲಿ ಅಷ್ಟು ಒದ್ದಾಡುತ್ತಿರುವಾಗ, ನಮಗೆ ಕೊಂಚ ತಲೆ ತಿರುಗುವುದು ನ್ಯಾಯವೇ ಆಗಿದೆ. ಅಲ್ಲದೆ, ಮತ್ತೊಂದು ವಿಷಯ.... ಸಿಲ್ವರ್‌ಜೂಬಿಲಿ ಟೀಮು ಬಂದಿತ್ತಲ್ಲಾ ಬೆಂಗಳೂರಿಗೆ.... ಆಗ, ಸಿಲ್ಲಿ ಪಾಯಿಂಟ್‌ನಲ್ಲಿ ನಿಂತಿದ್ದ....ಆ..."

೬. "೧೦೦ಪಲ್ಲಾ ಕಡಲೆಕಾಯಿ ತಿಂದ ಅಪ್ರತಿಮ ವೀರ, ಎಂಬ ಕೀರ್ತಿ ಗಳಿಸಿದ ನೀವು ನಾಳೆಯಿಂದ ಕ್ರಿಕೆಟ್ ನೋಡುವುದಕ್ಕೆ ಬರುತ್ತೀರಾ? ಇದನ್ನು ಮುಂದುವರಿಸುತ್ತೀರಾ?"


"ನೋಡಿ. ಬ್ಯಾನಿಸ್ಟರ್ ಎಂಬುವನು ಒಂದುಮೈಲಿ ದೂರವನ್ನು ನಾಲ್ಕು ನಿಮಿಷಕ್ಕೆ ತುಸು ಕಮ್ಮಿ ಟೈಮಲ್ಲಿ ಓಡಿದ. ರಿಕಾರ್ಡ್ ಸ್ಥಾಪಿಸಿದ. ಪ್ರಪಂಚವೆಲ್ಲ ಬೆರಗಾಗಿ ಚಪ್ಪಾಳೆ ತಟ್ಟಿತು, ಇವತ್ತು ನನ್ನ ಸಾಹಸಕ್ಕೆ ಮಾಡುತ್ತಿರುವ ಹಾಗೆ

ಮೂರೇ ಮೂರು ತಿಂಗಳೊಳಗೆ ಲ್ಯಾಂಡಿ ಅಂತ ಇನ್ನೊಬ್ಬ ಹುಟ್ಟಿಕೊಂಡ ಅವನಿಗಿಂತ ವೇಗವಾಗಿ ಓಡುವುದಕ್ಕೆ ಇವನ ಕಾಲಿಗೆ ಬುದ್ಧಿ ಬಂತು. ರಿಕಾರ್ಡ್ ಸ್ಥಾಪಿಸಿದವರಿಗೆ ಇದೊಂದು ಗೋಳು. ಅವರು ನಿಲ್ಲುವಂತೆಯೇ ಇಲ್ಲ, ನಡೆ ಮುಂದೆ, ನಡೆ ಮುಂದೆ, ನಡೆ ಮುಂದೆ ಬೇಗ, ವೇದಾಂತಕೇಸರಿಯೆ, ನಡೆ ಮುಂದೆ ದೂರ" ಇದೇ ನಮ್ಮ ಶಿರೋಲಿಖಿತ.

೧. "ಅಂದರೆ, ಅರ್ಥವಾಗಲಿಲ್ಲ"

"೧೦೦ ಪಲ್ಲಾನ ೧೫೦ ಮಾಡಬೇಕು, ನಾನು ಈ ಸೀಸನ್ ಮುಗಿಯುವುದರೊಳಗಾಗಿ....ನಾಳೆ ಸಿನಿಮಾಸ್ಟಾರ್ ಕ್ರಿಕೆಟ್ ಇದೆಯಲ್ಲಾ, ಆಗೊಂದು ೨೫ ಸೇರನ್ನಾದರೂ ಧ್ವಂಸಮಾಡಬೇಕು"

— ಸಾರಥಿ.



ಎರಡು ಐದು ವರ್ಷದ ಪ್ಲಾನ್ ಹಾಕಿದೇವಲ್ಲಾ !
ಇನ್ನೂ ಬಡತನ ಅಂತ ಬಡಕೊಂಡರೆ ಏನುಮಾಡೋದು !


ದೇವಾ!

ದೇವಾ!
ಶ್ರಮದಾನ ಮಾಡು, ಬಾ!
ಭೂದಾನ ಮಾಡುಬಾ!
ಧನದಾನ ಮಾಡುಬಾ!
ಗೋದಾನ ಮಾಡುಬಾ!

ಇಂದು ನೀ ಮಾಡಿದರೆ,
ನಾಳೆ ಅವನೇ ನಿನಗೆ,

ಶ್ರಮದಾನ ಮಾಡುವನು,
ಭೂದಾನಮಾಡುವನು,
ಧನದಾನ ಮಾಡುವನು,
ಗೋದಾನ ಮಾಡುವನು,
ಈ ದಾನ ಇಂದು, ಆ ದಾನ ನಾಳೆ,
ದಾನಿ ನೀನಿಂದು, ಅವ ನಾಳೆ ದಾನಿ;
ಹೀಗೆ ಹೇಳುವ ಜನಕೆ,
ಬುದ್ಧಿ ದಾನ
ನೀನೆ ಮಾಡೋ, ದೇವಾ!—
ನಾ ಮಾಡಲಾರೆ.

—ಪಾಟೀಲ.



ಮಕ್ಕಳ ಪ್ರೋಗ್ರಾಂ ನೀವು ಹೀಗೆ ಕೇಳ್ತಾ ಇದ್ದರೆ, ಮನೆ ಪಾಠ ನಾನು ಹೇಗೆ ಮುಗಿಸಲಪ್ಪಾ!

ಮಗನ ಭವಿಷ್ಯ

ಲಾಯರ್ ನಂಜಯ್ಯನವರ ಮನೆಗೆ ಊಟಕ್ಕೆ ಹೋಗಿದ್ದೆ. ಕರೆದಿದ್ದರು, ಪಾಪ, ನನ್ನನ್ನೂ ವೆ. ಅವತ್ತು ಅವರ ಮಗನಿಗೆ ಚೌಳ. ಪುಷ್ಕಳವಾಗಿ ಮಾಡಿದ್ದರು, –ಬಾಳೆಕಂಬ, ತೋರಣ, ಓಲಗ, ಮಗುವಿಗೆ ಹೊಸ ಅಂಗಿ, ಗಂಡ ಹೆಂಡಿರಿಗೆ ಪಂಚೆ, ಸೀರೆ, ಇತ್ಯಾದಿ ಎಲ್ಲವನ್ನೂ.

ಊಟವೂ ತಕ್ಕಮಟ್ಟಿಗಿತ್ತು. ಸೀ ಬೂಂದಿಯನ್ನ ಡಾಲ್ಡಾದಲ್ಲಿ ಕರಿದು, ತುಪ್ಪ ಚಿಮುಕಿಸಿದ್ದ, ಕೇಸರಿಬಾತಿಗೆ ಪವುಡರ್ ಚೆಲ್ಲಿದ್ದ, ಹುಳಿಯನ್ನ ತಳ ಸೀದಿತ್ತು, ಸಂಡಿಗೆ ಅರ್ಧ ಬೆಂದಿತ್ತು, ಅನ್ನ ಬರೀ ಮಿಡ್ಡೆ. ಆದರೇನು? ಎಲ್ಲರಿಗೂ ಅಗ್ರ ಬಾಳೇಯೆಲೆ ಹಾಕಿದ್ದ. ಕೂರುವುದಕ್ಕೆ ಮಣೆ ತರಿಸಿದ್ದ, ಹಾಸ್ಟಲಿಂದ. ಕುಡಿಯುವ ನೀರನ್ನ ಬೆಳ್ಳಿ ಟಂಬ್ಳರಲ್ಲಿ ತುಂಬಿದ್ದ, ಸಬ್‌ರಿಜಿಸ್ಟ್ರಾರ್ ಮನೆಯಿಂದ ತರಿಸಿ.

ಊಟವಾದಮೇಲೆ, ಎಲೆ ಅಡಿಕೆ, ಮಾತು, ಚರ್ಚೆ, ಪ್ರಾರಂಭ. ಎಲ್ಲ ಆ ಮಗು ವಿಷಯವೇ. "ಇವನನ್ನ ರಾಜಕೀಯಕ್ಕೇ ತಯಾರುಮಾಡುತ್ತಿದ್ದೇನೆ. ಶುದ್ಧ ದಡ್ಡ. ಓದಿ ಪಾಸುಮಾಡಲಾರ. ಮಾಡಿದರೂ, ಇಂಜಿನೀರಿಂಗ್, ಮೆಡಿಕಲ್ ಸೀಟು ಸಿಕ್ಕುವುದು ಭಗೀರಥ ಪ್ರಯತ್ನ ಬಿ.ಎಸ್‌ಸಿ. ಸೀಟಿಗೂ ಕಂಡವರ ಕಾಲು ಹಿಡಿಯಬೇಕಾದ ಕಾಲ, ಈಗಲೇ.

ಮಗು ಗಂಟಲು ಜೋರಾಗಿದೆ; ಕೈ ಉದ್ದವಾಗಿದೆ; ನಟನೆ ನಾಟಕ ಈಗಲೇ ಚೆನ್ನಾಗಿ ಬರುತ್ತದೆ. ಇನ್ನೇನುಬೇಕು, ರಾಜಕೀಯಕ್ಕೆ." ಎಂದರು.

"ಲೋ! ಶಂಕ್ರೂ! ನೀನು ರಾಜಕೀಯಕ್ಕಿಳಿಯುತ್ತೀಯೇನೋ?" ಎಂದು ಆ ಮಗುವನ್ನು ಕೇಳಿದರು, ನಂಜಯ್ಯನವರು, ಅವನನ್ನೆಳೆದು ಮಡಿಲಲ್ಲಿ ಕೂರಿಸಿ ಕೊಳ್ಳುತ್ತಾ. "ನೀನು ಹೆಂಗೆ ಹೇಳುತ್ತೀಯೋ ಹಂಗೆ" ಎಂದಿತು, ಮೂರುವರ್ಷದ ಮುದ್ದು.

"ಕಾಂಗ್ರೆಸ್ ಪಕ್ಷಕ್ಕೇ ಸರಿ, ಇವನು" ಎಂದರು ಲಕ್ಷ್ಮಣಪ್ಪನವರು. "ಇಂಥವರು ಬೇಕಾಗಿದಾರೆ, ನಮ್ಮ ಪಕ್ಷಕ್ಕೆ. ಓ ಅಂದರೆ ಠೋ ಎನ್ನುವವರು ನಮಗೆ ಬೇಡವೇ ಬೇಡ. ಹೇಳಿದಹಾಗೆ ಕೇಳಿಕೊಂಡು, ತಂಟೆ ತಕರಾರು ತೆಗೆಯದೆ" ಎಂದು ಮುಂದು ವರಿಸಿದರು.

ಆಗ, ನಂಜಯ್ಯನವರು, "ನೋಡಿ, ಲಕ್ಷ್ಮಣಪ್ಪನವರೇ! ಅದನ್ನೇ ನಾನೂ ಯೋಚನೆಮಾಡುತ್ತಿದ್ದೆ. ಯಾವ ಪಕ್ಷಕ್ಕೆ ಇವನನ್ನ ತಯಾರುಮಾಡೋಣ, ಅಂತ. ಇವನು ಬೆಳೆದು, ದೊಡ್ಡವನಾಗಿ, ಚುನಾವಣೆಗೆ ಸಿದ್ಧವಾಗಬೇಕಾದರೆ, ಇನ್ನೂ ಕನಿಷ್ಠ ೨೫, ೩೬ ವರ್ಷ, ಅಂದರೆ, ೧೯೮೦. ಆಗ ಈಗಿನ ಪಕ್ಷಗಳ ಪೈಕಿ ಯಾವು ದಿರುತ್ತದೆ, ಯಾವುದಿರುವುದಿಲ್ಲ, ಹೊಸ ಪಕ್ಷಗಳು ಯಾವುವು ಹುಟ್ಟಿಕೊಳ್ಳುತ್ತವೆ? ಅದನ್ನ ಪತ್ತೆ ಹಚ್ಚಬೇಕು; ಅದಕ್ಕೆ ತಯಾರಿಕೊಡಬೇಕು".

"ಜನಸಂಘ?" ಎಂದರು, ಶಾಸ್ತ್ರಿಗಳು.

"ಅದು ಇನ್ನ ಐದುವರ್ಷಕ್ಕೆ ಮಹಾಜನಸಂಘವಾಗಿ, ನಂತರ...." ಎಂದು ಶೀನಪ್ಪನವರು ಮಾತು ತೆಗೆಯುವುದರೊಳಗಾಗಿ, ಮಹಾಬಲಯ್ಯನವರು,

"ಸ್ತ್ರೀ ಎಸ್.ಪಿ?" ಎಂದರು.

ನಂಜೈಯ್ಯನವರು ನಗಲಿಲ್ಲ. "ಅದಕ್ಕವನು ನಾಲಾಯಕ್ಕು" ಎಂದರು, ಅಷ್ಟೆ.

"ಕಮ್ಯೂನಿಸ್ಟ್?" ಎಂಬ ಪ್ರಶ್ನೆಯೂ ಬಂತು. ಆದರೆ, ಜೋಯಿಸರೂ ರಾಮಪ್ಪನವರೂ ಚೆನಿವಾದಿಂದೀಚೆಗೆ ಕಮ್ಯೂನಿಸ್ಟರಲ್ಲಿ ಖಾರ ಕಡಿಮೆ ಆಗಿದೆಯೆಂದೂ ಅವರ ಅಚ್ಚ ಕೆಂಪು ಮಾಸಿ ಮಾಸಿ ಕಾಷಾಯವಾಗಿ, ಕಿತ್ತಲೆಗೆ ತಿರುಗಿ, ಪಕ್ಷದ ಬಣ್ಣವೇ ಬದಲಾಗುತ್ತದೆಂದೂ ವಾದಿಸಿದರು.

"ಅದನ್ನೇ ನಾನೂ ಹೇಳುವುದು. ಇವನನ್ನ ಇವತ್ತಿನ ಯಾವುದಾದರೂ ಪಾರ್ಟಿಗೆ ಸೇರಿಸಿ ಅದರ ಲೀಡರಾಗಲು ಇವನಿಗೆ ತರಪೇತುಕೊಟ್ಟರೆ, ೩೦ ಮುಟ್ಟು ವುದರೊಳಗಾಗಿ ಅದು ಹರೋಹರ ಎಂದರೆ, ಇವನ ಕನಸು ಪುಡಿ ಪುಡಿ, ಜೀವನ ಕಷ್ಟ....೩೦ ವರ್ಷದಾಚೆ ಯಾವ ಎರಡು ಪಕ್ಷಗಳು....?" ಎಂದು ನಂಜಯ್ಯ ತಲೆ ಕೆರೆದರು.

"ಪಶುಪಕ್ಷ; ಶಿಶುಪಕ್ಷ–ಎರಡೇ" ಎಂದರು ಜೋಯಿಸರು, ಅಧಿಕಾರವಾಣಿ ಯಿಂದ.

"ಇವನನ್ನ ಯಾವುದಕ್ಕೆ ಅಣಿಮಾಡಲಿ?" ಎಂದು ಪೇಚಾಡಿದರು, ನಂಜಯ್ಯ ನವರು.

"ಶಿಶುಪಕ್ಷ!"

"ಛೆ! ೩೦ವರ್ಷದ ಧಾಂಡಿಗನಾಗಿ ಬೆಳೆದಿರುತ್ತಾನೆ"

"ಹಾಗಾದರೆ, ಪಶುಪಕ್ಷ", ಎನ್ನುತ್ತ, ಅವನನ್ನು ತೃಪ್ತಿಪಡಿಸಿ, ನಾವೆಲ್ಲರೂ ಎದ್ದೆವು.

— ಕಾಮತ್

ಸಾಮ್ರಾಜ್ಯದ ಆಸ್ಥಾನದಲ್ಲಿ

"ಹದಿನಾಲ್ಕು ಲೋಕಗಳಿಗೂ ಒಡೆಯನಾದ ಮಹಾಪ್ರಭೋ, ಚತುಸ್ಸಾಗರ ಸೀಮಾನಾಥನೇ" ಎನ್ನುತ್ತ ಅಮಾತ್ಯಕೇಸರಿ ನೆಲಕ್ಕೆ ಬಿದ್ದನು. ಬಿದ್ದುಕೊಂಡೇ, "ವಿದ್ಯುಲ್ಲತೆ ಎಂಬ ಐವತ್ತೆಂಟನೇ ನಂಬರ್ ರಾಣಿ ಸೋಮನೆಂಬ ಕೂಲಿಯವನೊಡನೆ ಗುಪ್ತ ಸಂಭಾಷಣ", ಎಂದು ಪಿಸುಗುಟ್ಟಿ, ಎದ್ದು, ಧೂಳೊರಸಿಕೊಂಡನು.

"ಎಲವೋ! ಪ್ರಣಾಮವನ್ನು ಮುಗಿಸಿದನಂತರ ಮಾತನಾಡು! ಅಥವ, ಮಾತು ಮುಗಿದನಂತರ ಪ್ರಣಾಮಮಾಡು. ಬೋರಲಾಗಿ ಮಲಗಿ ನೆಲದೊಳಕ್ಕೆ ಮಾತಾಡಿದರೆ, ನನಗೆ ಹೇಗೆ ಅರ್ಥವಾಗಬೇಕು?", ಎಂದು ಖಾವಂದರು ಅಪ್ಪಣೆಕೊಡಿಸಿದರು.

"ತಂದೆಯೇ, ಸುದ್ದಿ ಬಹು ಮುಖ್ಯವಾದದ್ದರಿಂದಲೂ, ಅತಿ ಶೀಘ್ರದಲ್ಲೇ ಪರಿಹಾರ ದೊರೆಯಬೇಕಾದದ್ದರಿಂದಲೂ....ಸಾಷ್ಟಾಂಗ ಪೂರೈಸುವ ಮೊದಲೇ..., ಅರಿಕೆ ಮಾಡಿಕೊಳ್ಳಬೇಕಾಯಿತು, ಕ್ಷಮಿಸಬೇಕು; ಸಂಪ್ರದಾಯ, ಶರಣನಾಗಿ ನಾನು...." ಎಂದರು, ಅಮಾತ್ಯರು.

"ಸಾಕು! ಮುಚ್ಚು ಬಾಯಿ! ಸಂಪ್ರದಾಯ, ಸಂಪ್ರದಾಯ ನನಗೆ ಆಕಳಿಕೆ ಬರುತ್ತಿದೆ" ಎಂದು ರೇಗಿದರು, ಪ್ರಭುಗಳು.

"ಆದರೂ, ವಿದ್ಯುಲ್ಲತೆಯ ವರ್ತನೆ ಸಂಪ್ರದಾಯಕ್ಕೆ ತೀರ ವಿರೋಧ, ತಾವು ಇದನ್ನು ಗಮನಕ್ಕೆ ತೆಗೆದುಕೊಂಡು, ಅವರಿಬ್ಬರನ್ನೂ ಶೂಲಕ್ಕೇರಿಸಿ...."

"ಇಲ್ಲ, ಇಲ್ಲ! ನಿನ್ನ ಮಾತಿನಂತೆ ನಾನು ನಡಿಯಬೇಕೊ, ನನ್ನ ಮಾತಿನಂತೆ ನೀನು ನಡಿಯಬೇಕೊ?"

"ಹಾಗಾಗದು! ಅವರಿಬ್ಬರನ್ನೂ ಸಮ್ಮುಖದಲ್ಲಿ ಕರೆಸಿ ನಿಲ್ಲಿಸಿ, ಖಡ್ಗವನ್ನಾದರೂ ಹೊರಗೆಳೆದು ಝಳಪಿಸಬೇಕು."

"ಬೇಡ, ಬೇಡ! ಅವರಿಬ್ಬರಿಗೂ ಸುಖವಾಗಿ ತಲೆತಪ್ಪಿಸಿಕೊಂಡು, ಪರಾರಿಯಾಗಲು, ಅನುಕೂಲ ಕಲ್ಪಿಸಿಕೊಟ್ಟು ಬಿಡು . ವಿದ್ಯುಲ್ಲತೆ ಸೋಮನ ಕಣ್ಣಿಗೆ ಸುಂದರಿ ಎನಿಸಿದರೆ, ನನ್ನ ಅಭ್ಯಂತರವೇನಿಲ್ಲ"

"ಹಾಗೆ ಮಾಡಿದರೆ, ಅಪಮಾನದ ಕಾರ್ಮೋಡಗಳು ಕವಿದು, ಧವಳ ಕೀರ್ತಿಯನ್ನು ಕಳಂಕಿಸಿ ಬಿಡುತ್ತದೆ. ಅವರಿಗೆ ತಕ್ಕ ಶಿಕ್ಷೆ ಆಗಲೇಬೇಕು"

"ನಿನ್ನ ತಲೆಕಾಯಿ! ಅದೇ ಅಲ್ಲವೆ, ಅವರಿಗೆ ಶಿಕ್ಷೆ?"

"ನನ್ನದೊಂದು ಬಡ ಸಲಹೆ! ನಾನು ಆ ಸೋಮನನ್ನು ಕಂಡು, ನೀನು ಮಾಡುತ್ತಿರುವುದು ಮಹಾಪರಾಧ, ರಾಜದ್ರೋಹ ಎಂದೆಲ್ಲಾ ಹೆದರಿಸುತ್ತೇನೆ...."

"ಹುಂ! ಮಾಡು! ಅದರಿಂದ, ಅವನು ತನ್ನ ಸಂಕಲ್ಪವನ್ನು ಮತ್ತಷ್ಟು ತೀವ್ರವಾಗಿಸಿ,, ನಿನ್ನ ಹೆದರಿಕೆಗೆ ಇದೇ ತಕ್ಕ ಪ್ರತೀಕಾರ ಎಂದು ನಿಶ್ಚಯಿಸಿ, ಅವಳನ್ನು ಕರೆದುಕೊಂಡು ಹೊರಟೇಬಿಡುತ್ತಾನೆ. ಅಮಾತ್ಯರೆ! ನಿನಗೆ ಇನ್ನೂ ಈಗಿನಕಾಲದ ಹುಡುಗರ ಮನೋಭಾವ ತಿಳಿಯದು".

"ಸೋಮನಿಗೂ ನಾನು ಸಂಪ್ರದಾಯ, ಧರ್ಮ, ಇತ್ಯಾದಿ ಉಪದೇಶಮಾಡುತ್ತೇನೆ".

"ಹುಚ್ಚು ನಿನಗೆ! ನನ್ನ ಐವತ್ತೆಂಟನೆಯದನ್ನಪಹರಿಸುವುದು ಒಂದು ಮಹಾ ಸಾಹಸ ಎಂದು ತಿಳಿದುಕೊಂಡಿದಾನೆ, ಆ ಬೆಪ್ಪ!"

"ಚತುಸ್ಸಮುದ್ರ ಸೀಮಾ...."

"ಕೂತುಕೊ, ಸುಮ್ಮನೆ.... ಯಾವನೋ ಕಂಚುಕಿ ಬಂದಿದಾನೆ, ನಿನ್ನನ್ನ ನೋಡುವುದಕ್ಕೆ. ಏನು ಅಂತ ಕೇಳು" ಎಂದರು ಚಕ್ರವರ್ತಿ ಸಾರ್ವಭೌಮರು. ಕಂಚುಕಿಯ ಸಂದೇಶವನ್ನು ತಿಳಿದನಂತರ,

"ಅವರಿಬ್ಬರೂ ನಮ್ಮ ಸಾಮ್ರಾಜ್ಯದಾಚೆಗೆ ಪರಾರಿ ಆಗಿದಾರಂತೆ, ಖಾವಂದ್! ಎಂತಹ ದುರಂತ" ಎಂದರು ಅಮಾತ್ಯಕೇಸರಿ.

"ತಂಟೆ ತೀರಿತು! ಬಾ! ಕೂತುಕೊ" ಎಂಬ ಉತ್ತರ ಬಂತು.

— ಕಾಮತ್.

ಬರಹಗಾರರಿಗೆ ಪ್ರೋತ್ಸಾಹ

ಬರಹಗಾರರಿಗೆ ಪ್ರೋತ್ಸಾಹವಿಲ್ಲ ಎಂಬ ಕಾಲ ಹಿಂದಾಗಿಹೋಯಿತು-ಎಂದು ಮೊನ್ನೆ ಯಾರೋ ಹೇಳಿದರು. ಆ ಮಾತು ನಿಜ ಎನಿಸುತ್ತದೆ.

ತಿಪ್ಪಲಾಪುರದ ಸಂತೇ ಮಾರ್ಕೆಟಿನ ಗೇಟ್‌ಬಾಗಿಲ ಎದುರಿಗಿರುವ ಬಸ್ ಸ್ಟ್ಯಾಂಡ್ ಪಕ್ಕದ ಖೋಮಳ ವಿಳಾಸ (ಸ್ಥಾಪನೆ ೧೯೩೦)- ಅಂತ ಪತ್ರಿಕೆಗಳಲ್ಲಿ ಜಾಹೀರಾತು ಬಂದಿದ್ದನ್ನು ನೀವು ನೋಡಿರಬಹುದು. ಆ ಖೋಮಳ ವಿಳಾಸದ ಪ್ರೊಪ್ರೈಟರ್ ಫಣಿರಾಯಪ್ಪನವರು "ಬರಹಗಾರರನ್ನು ಪ್ರೋತ್ಸಾಹಿಸುವುದಕ್ಕಾಗಿ ಇತ್ತೀಚೆಗೆ ಕೈಗೊಳ್ಳುತ್ತಿರುವ ಕಾರ್ಯಕ್ರಮಗಳು ಸ್ತುತ್ಯ"—ಎಂದು ವಾರ ಪತ್ರಿಕೆಗಳಲ್ಲಿ ಬಂದ ವರದಿಗಳನ್ನೂ ನೀವು ಓದಿರಬಹುದು. ಆ ಪತ್ರಿಕೆಗಳಲ್ಲಿ ಬಂದ ಸತ್ಯ ಸುದ್ದಿಗಳಲ್ಲಿ ಈ ಸುದ್ದಿ ಹೆಚ್ಚು ಸತ್ಯವಾದದ್ದು ಎಂದು ಭರವಸೆ ತಾಳಲು ಕಾರಣವಿದೆ.

ಖೋಮಳ ವಿಳಾಸ-ಸ್ಥಾಪನೆ ೧೯೩೦-ಗೊತ್ತು ತಾನೇ? ಸ್ಥಾಪನೆಯಾದಂದಿನಿಂದಲೂ ಅದು ಒಂದೇ ಕಟ್ಟಡದಲ್ಲಿರುವುದೂ, 'ವಪನ್' ಮಾಡಿದ ಕಾಲದ ಫರ್ನಿಚರುಗಳೇ ಇಂದಿಗೂ ಆಯಾ ಸ್ಥಾನದಲ್ಲಿಯೇ ವಿರಾಜಿಸುತ್ತಿರುವುದೂ ಮಾತ್ರವಲ್ಲದೆ ಹವೆಯು ಯಾವ ಹೊಡೆತಗಳನ್ನೂ ಲೆಕ್ಕಿಸದೆ ಅಂದಿನ ಬೋರ್ಡು ಇಂದಿನ ತನಕವೂ ಉಳಿದು ಬಂದಿರುವುದೂ ಯಾವ ಮಂತ್ರಿಮಂಡಲವನ್ನಾದರೂ ನಾಚಿಸುವ ವಿಷಯಗಳು.

ಖೋಮಳ ವಿಳಾಸದ ಅಂಜನಾಚ್ಛಾದಿತ 'ಹಾಲ್' ಎಂಬ ದೊಡ್ಡ ಕೊಟಡಿಯನ್ನು ದಾಟಿ, ಪಶ್ಚಿಮದ ಗೋಡೆಯ ಬದಿಯಲ್ಲಿಯೇ ತಡವರಿಸುತ್ತ ಮುಂದುವರಿದರೆ ಒಂದು ಬಾಗಿಲು ಸಿಗುತ್ತದೆ. ನಡೀರಿ ಒಳಕ್ಕೆ. ಅದೇ ಖೋಮಳ ವಿಳಾಸದ 'ಸ್ಪೆಷಲ್ ರೂಮು'. ಅದಕ್ಕೆ ಒಂದೇ ಒಂದು ಮುದ್ದಾದ ಪುಟ್ಟ ಕಿಟಕಿ. ಆದರ ಒಂದು ಕಿಟಕಿಯಮೇಲೆ ಫಣಿಯಪ್ಪನ ಕುಲದೇವತೆಯ ಪಟವಿದೆ. ಮುಂದೆ ಒಂದು ಕೆಂಪು ಬಲ್ಪು ಸದಾ ಮಿಣುಕುತ್ತಿರುತ್ತದೆ. ನಂದಾದೀಪದ ಸೇವೆ! ಆ ಬಲ್ಪಿನ ಬೆಳಕಿನಲ್ಲಿ ಚಿತ್ರದ ದೇವತೆ ಯಾವುದೆಂದು ಕಂಡುಹಿಡಿಯುವ ಪ್ರಯತ್ನದಿಂದ ಪ್ರಯೋಜನವಿಲ್ಲ. ಹೋಗಲಿ ಬಿಡಿ! ನೀವು ಭಾವುಕರಾದರೆ ಒಂದುಸಲ ಕೈಮುಗಿಯಿರಿ. ಅಥವಾ ಮನಸ್ಸಿನಲ್ಲೇ ಜೋತಮಾಡಿದರೂ ಅಡ್ಡಿಯಿಲ್ಲ. ಅನಂತರ

ಒಂದು ಕುರ್ಚಿಯನ್ನು ಅಲಂಕರಿಸಿ. ಅಷ್ಟರಲ್ಲಿ ಫಣಿರಾಯಪ್ಪನವರೇ ಸ್ವತಃ ಬಂದು ಮಾತನಾಡಿಸುತ್ತಾರೆ. ಏನು ಕೊಡಲಿ ಎಂದು ಕೇಳಿ ಮಾಣಿಗಳನ್ನು ಕರೆದು ನಿಮ್ಮ ಆರ್ಡರು ತಿಳಿಸುತ್ತಾರೆ. ಒಂದುವೇಳೆ ಅವರು ಬರುವುದು ಒಂದೆರಡು ನಿಮಿಷ ತಡವಾದರೂ ನೀವು ತಾಳ್ಮೆಯಿಂದ ತೆಪ್ಪಗಿರಬೇಕು ...ಹುಂ ತೆಪ್ಪಗಿರಬೇಕು ಇಲ್ಲ ವಾದರೆ ಶಿಕ್ಷೆ ಉಂಟು, ಜೋಕೆ! ಫಣಿರಾಯಪ್ಪನವರೇನೂ ಅಂತಹವರಲ್ಲ. ಅವರು ಫಣಿರಾಯರಾದರೂ ಬುಸ್ಸೆಂದೆವರಲ್ಲ. ನೀವು ಸುಮ್ಮನೆ ಕೂಡದೆ ಅಂಗ ಚೇಷ್ಟೆ ಮಾಡಿ ಮೈ ಅಲ್ಲಾಡಿಸುವ ಅಸಮಾಧಾನ ತೋರಿಸಿದರೆ ನೀವು ಕುಳಿತ ಕುರ್ಚಿಯೇ ನಿಮ್ಮನ್ನು ಶಿಕ್ಷಿಸುತ್ತದೆ. ಸ್ಪೆಷಲ್ ರೂಮಿನ ಕುರ್ಚಿಗಳ ತಳ ಕೊಂಚ ಸೀಳಿಹೋಗಿದೆ. ಸ್ವಾಮಿ! ಕಾಲುಗಳೂ ಭದ್ರವಾಗಿಲ್ಲ. ಹೀಗಿರುವುದರಿಂದ ಒಮ್ಮೊಮ್ಮೆ ಚಿಮಟಿಸೇವೆಯ ಅನುಭವವಾಗುತ್ತದೆ. ಆದ್ದರಿಂದಲೇ ಅಲ್ಲಾಡದೆ ಕೂತಿರದಿದ್ದರೆ ಶಿಕ್ಷೆ ಅಂದಿದ್ದು.

ಖೋಮುಳ ವಿಳಾಸದ ತಿಂಡಿ ತೀರ್ಥಗಳ ವಿವರಗಳನ್ನು ಬಣ್ಣಿಸಿ ಬಾಯಲ್ಲಿ ನೀರೂರಿಸುವ ಕೆಲಸ ಸದ್ಯ ಬೇಡ. ಮುಖ್ಯ ಸ್ಪೆಷಲ್ ರೂಮಿನ ಮಹತ್ವವನ್ನೇ ಗಮನಿಸಬೇಕು. ಕಳೆದ ಭಾನುವಾರ ಫಣಿರಾಯಪ್ಪನವರು ಸ್ಪೆಷಲ್ ರೂಮಿನಲ್ಲಿ ಕುಳಿತು ಬರೆಯುವವರ ಸೌಕರ್ಯಕ್ಕಾಗಿ ಒಂದು ಮಸಿದೌತಿ, ಒಂದು ಪೇನಾ, ಮತ್ತು ಕೆಲವು ಪೆನ್ಸಿಲ್ ತುಂಡುಗಳನ್ನು ಇರಿಸಿ, ಬರಹಗಾರರ ಮೆಚ್ಚುಗೆ ಗಳಿಸಿದರು. ಆ ಸ್ತುತ್ಯ ವಿಚಾರವೇ ವಾರಪತ್ರಿಕೆಗಳಲ್ಲಿ ವರದಿಯಾದದ್ದು. ಮುಂದೆ ಬರಹಗಾರರಿಗಾಗಿ ಕಾಗದ ಒದಗಿಸುವ ಯೋಜನೆಯೂ ಅವರಿಗಿದೆಯಂತೆ. ಸದ್ಯ ಒಮ್ಮೆ ಖಾಲಿಯಿರುವ ನಾಟಕ ಸಿನಿಮಾ ಇತ್ಯಾದಿಗಳ ಒದರು ಚೀಟಿಗಳನ್ನು ಮಾತ್ರ ಸ್ಪೆಷಲ್ ರೂಮಿನಲ್ಲಿ ಜೋಡಿಸಿಟ್ಟಿರುತ್ತಾರೆ.

ಬರವಣಿಗೆಯ ಕೆಲಸಕ್ಕಾಗಿ ಯಾರಾದರೂ ಹೋಟಲನ್ನು ನಂಬುತ್ತಾರೆಯೆ ಎಂದು ಕೇಳಬೇಡಿ. ಪ್ರಾಯಶಃ ಖೋಮುಳ ವಿಳಾಸವನ್ನು ಚೆನ್ನಾಗಿ ತಿಳಿದವರಲ್ಲ ನೀವು. ಕೇಳುವುದಾದರೆ ತಿಪ್ಪಲಾಪುರದ ಬರಹಗಾರರನ್ನು ಕೇಳಿ. ಯಾವ ಬರವಣಿಗೆಯ ಕೆಲಸಕ್ಕಾದರೂ ಸ್ಪೆಷಲ್ ರೂಮ್–ಖೋಮುಳ ವಿಳಾಸ–ಬಿಟ್ಟರೆ ಬೇರೆ ಅಂಥಾ ತಾಣವಿಲ್ಲ ಎನ್ನುತ್ತಾರೆ.

ಸ್ಪೆಷಲ್ ರೂಮಿನ ಬರಹಗಾರರಲ್ಲಿ ಶೇಕಡ ಐವತ್ತು ಮಂದಿ ಕೇವಲ ಪತ್ರ ಲೇಖಕರು – ಅಂದರೆ ನೆಂಟರಿಷ್ಟರಿಗೆ ಪತ್ರ ಬರೆಯುವವರು. ಖೋಮುಳ ವಿಳಾಸದ ತಿಂಡಿ ತಿನಸು ಪಾನೀಯಗಳ ಪ್ರಭಾವದಿಂದಲೂ, ಮನೆಯಲ್ಲಿ ಸಿಗದಂತಹ ಒಂದು ವಿಶಿಷ್ಟ ವಾತಾವರಣ ಸ್ಪೆಷಲ್ ರೂಮಿನಲ್ಲಿ ದೊರೆಯುವುದರಿಂದಲೂ, ಆ ಕೋಣೆಯಲ್ಲಿ ಕುಳಿತು ಒಂಭತ್ತುಕಾಸಿನ ಕಾರ್ಡನ್ನೇ ಆಗಲೀ ಹನ್ನೆರಡುಗಜದ ಮಹಾ ನಿರೂಪವನ್ನಾಗಲೀ ಬರೆಯಲು ತೊಡಗಿದರೆ ಬರವಣಿಗೆ ಬರೆಯುವವನನ್ನೇ ಎಳೆದುಕೊಂಡು ಹೋಗುತ್ತದಂತೆ. ಕೊಟ್ಟ ಸಾಲವ ಕೊಡದ ನಾಯಿಗೆ ಬರೆಯುವ ಕಚ್ಚು ಕಾಗದ

ವಾಗಲೀ, ಮೆಚ್ಚಿದಾಕೆಗೆ ಬರೆಯುವ ಹುಚ್ಚುಚ್ಚು ಕಾಗದವಾಗಲೀ–ಎಂಥದಾದರೂ ಸರಿಯೆ ಸ್ಪೆಷಲ್ ರೂಮಿನಲ್ಲಿ ಬರೆದರೆ ಅದಕ್ಕೆ ಎಲ್ಲಿಲ್ಲದ ಕಳೆ. ಮಗಳನ್ನು ಕರೆದುಕೊಂಡುಹೋಗಿ ಒಂದೆರಡು ತಿಂಗಳುಗಳಾದರೂ ರಿಲೀಫ್ ಕೊಡಲೊಪ್ಪದ ಮಾವನಿಗೆ ಛೀಮಾರಿ ಹಾಕಿ ಬರೆದು ನಷ್ಟಪೇಡು ಮಾಡಿಸಲು ಹವಣಿಸುವ ಅಳಿಯಂದಿರೊಬ್ಬರಿಗೆ ಸ್ಪೆಷಲ್‌ರೂಮು ಹೊಕ್ಕೊಡನೆ ಎಲ್ಲಿಲ್ಲದ ಶಬ್ದ ಸಂಪತ್ತು ಬುರುಡೆಗೆ ಹೊಳೆಯುತ್ತದೆಂಬುದನ್ನು ಅವರು ಘಂಟಾಘೋಷವಾಗಿ ಸಾರಿದ್ದಾರೆ. ಇದೆಲ್ಲ ಪತ್ರಲೇಖಕರ ವಿಚಾರವಾಯಿತು.

ಇನ್ನು ಮೂಕರ್ಜಿ ಬರೆಯುವವರ ವಿಶಿಷ್ಟ ಲೇಖಕ ವರ್ಗವೊಂದಿದೆ. ಸ್ವತಃ ಫಣಿರಾಯಪ್ಪನವರೇ ಈ ವರ್ಗದ ಸದಸ್ಯರಾದ್ದರಿಂದ ಆ ಕುರಿತು ವಿಶೇಷವಾಗಿ ವಿಸ್ತರಿಸುವುದು ಸೊಗಸಲ್ಲ. ಕ್ಷೇಮವೂ ಅಲ್ಲ.

ಕೊನೆಯದಾಗಿ ಐನ್ ಸಾಹಿತಿಗಳ ವಿಚಾರ. ಅದೇ ಮುಖ್ಯವಾದದ್ದು. ಖೋಮಳ ವಿಳಾಸದ ಸ್ಪೆಷಲ್ ರೂಮ್ ಇಲ್ಲದಿದ್ದರೆ ತಿಪ್ಪಳಾಪುರದ ಹೆಸರು ವಾರ ಪತ್ರಿಕೆಗಳಲ್ಲಿ ಇಷ್ಟೊಂದುಸಲ ಖಂಡಿತವಾಗಿಯೂ ಅಚ್ಚಾಗುತ್ತಿರಲಿಲ್ಲ. ಒಳಗಿನ ಶಕ್ತಿ ಎಂಥದೇ ಇರಲಿ, ಸರಿಯಾದ ಸನ್ನಿವೇಶವಿಲ್ಲದಿದ್ದರೆ ಸಾಹಿತ್ಯ ಸೃಷ್ಟಿಯಾಗುವುದುಂಟೆ? ತಿಪ್ಪಲಾಪುರದಲ್ಲೇನು ಬೆಟ್ಟವೆ, ಕಡಲೆ, ವನಂಗಳೆ? ಕೊನೆಗೆ ಒಂದು ವಾನರ ಕೂಡಾ ಇಲ್ಲ ಸ್ಫೂರ್ತಿಕೊಡುವುದಕ್ಕೆ. ಕೊಚ್ಚೆಯ ಕೊಳವೊಂದಿದೆ ಅದರಲ್ಲಿ ಕಮಲವಿಲ್ಲ. ಕೇವಲ ಮೀನ್ನಿಕುರ್ಗಂ, ಕಪ್ಪೆಯಿಕುರ್ಗಂ. ಮಾತ್ರವಲ್ಲದೆ ಮೂಗು ಹಿಡಿದು ಹತ್ತಿರ ಹೋಗಬೇಕು. ಅಂದಮೇಲೆ ಬೂದಿಮುಚ್ಚಿದ ಕೆಂಡದಂತಿರುವ ಉದೀಯಮಾನರ ಪ್ರತಿಭೆ ಪ್ರಜ್ವಲಿಸುವುದು ಹೇಗೆ? ಖೋಮಳ ವಿಳಾಸ ಈ ಕೊರತೆಯನ್ನು ತುಂಬಿಕೊಟ್ಟಿದೆ. ಸ್ಪೆಷಲ್ ರೂಮನ್ನು ಒದಗಿಸಿ ಫಣಿರಾಯಪ್ಪನವರು ನೀಡಿರುವ ಈ ಪ್ರೋತ್ಸಾಹವನ್ನು ಯಾರೂ ಕಡೆಗಣಿಸುವಂತಿಲ್ಲ.


'ಸ್ಪೆಷಲ್ ರೂಮೊಳಗೆ' ಕಾಲಿಟ್ಟೊಡನೆಯೆ "ದೀಪಾವಳಿ ಬರೆ ಹಾವಳಿ" ಎಂಬ ಕವನವನ್ನು ಕೊರೆಯಲು ಸ್ಫೂರ್ತಿ ಬಂದ ವಿಚಾರವನ್ನು ಕವಿಗಳೊಬ್ಬರು ಬೇರೆಡೆಯಲ್ಲಿ ಪ್ರಸ್ತಾಪಿಸಿದ್ದಾರೆ.

ಸ್ನೇಹಿತನೊಬ್ಬನು ಹೊಸದಾಗಿ ಲಗ್ನವಾದ ತನ್ನ ಗೆಳೆಯನನ್ನು ಈ ಸ್ಪೆಷಲ್ ರೂಮಿಗೆ ಎಳತಂದು ಅವನ ಲೆಕ್ಕದಲ್ಲಿ ಸಂತರ್ಪಣೆ ನಡೆಸಿ ಸಂತುಷ್ಟನಾದಾಗ ಒಂದು ಸಿನಿಮಾ ಚೀಟಿ ಎಳೆದುಕೊಂಡು ಲೇಖನಿ ಹಿಡಿದು ಗೀಚಿದನು. ಒಂದೆರಡು ದಿನಗಳ ನಂತರ ಪತ್ರಿಕೆಯಲ್ಲಿ ಬಂತು ಸುದ್ದಿ. "ತಿಪ್ಪಲಾಪುರ, ತಾ|| ೧೮. ಶ್ರೀಯುತ . ರು ತಮ್ಮ ವಿವಾಹದ ಸಂತೋಷಾರ್ಥವಾಗಿ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು....ವಿಜೃಂಭಣೆಯಿಂದ ನೆರವೇರಿತು .. ಇತ್ಯಾದಿ ಇತ್ಯಾದಿ" ಇಂಥ ವರದಿಗಳಿಂದ ತಿಪ್ಪಲಾಪುರ ಬೆಳಕಿಗೆ ಬರುತ್ತಿದೆ.

ಮಸಿ ಪೇನಾ ಒದಗಿಸಿರುವುದರಿಂದ ಸ್ಪೆಷಲ್ ರೂಮಿನ ಸದಸ್ಯರ ಸಂಖ್ಯೆ ಹೆಚ್ಚಾಗಿದೆ. ಮುಂದಿನವರ್ಷ ಖೋಮಳ ವಿಳಾಸದ (ಸ್ಥಾಪನೆ ೧೯೩೦) ರಜತೋತ್ಸವವಾದ್ದರಿಂದ ಆ ಕಾಲಕ್ಕೆ ಬರಹಗಾರರಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡುವ ಸಂಕಲ್ಪವಿದೆಯಂತೆ–ಪ್ರೊಪ್ರೈಟರ್ ಫಣಿರಾಯಪ್ಪನವರಿಗೆ. ಅವರ ಸಂಕಲ್ಪವನ್ನು ದೇವರು ನೆರವೇರಿಸಿಕೊಡಲಿ; ಬರಹಗಾರರಿಗೆ ಇತೋಪ್ಯತಿಶಯವಾಗಿ ಪ್ರೋತ್ಸಾಹ ಸಿಗಲಿ.

(ಸ್ಪೆಷಲ್ ರೂಮಿನವರಿಗಾಗಿ ಒಂದು ರೇಡಿಯೋ ತಂದಿರಿಸುವ ಭಯಂಕರ ಸುದ್ದಿಯನ್ನು ಫಣಿರಾಯಪ್ಪನವರು ಬೆಳಗ್ಗೆ ತಾನೆ ಹೊರಗೆಡವಿದರಂತೆ. ಆ ಗಗನ ಪಿಶಾಚಿಯನ್ನು ತಂದು ಸ್ಥಾಪಿಸುವುದಾದರೆ ಖಂಡಿತವಾಗಿ ಸತ್ಯಾಗ್ರಹ ಮಾಡುತ್ತೇವೆಂಬುದಾಗಿ ಬರಹಗಾರರ ಸಂಘವು ಕೂಡಲೆ ಠರಾವು ಹೊರಡಿಸಿದ್ದರಿಂದ ಫಣಿರಾಯಪ್ಪನವರು ಆ ಯೋಜನೆಯನ್ನು ಬಿಟ್ಟುಕೊಟ್ಟಿರುವರಂತೆ. ಅವರ ಸಹಾನುಭೂತಿ ಪರಧೋರಣೆ ಸ್ತುತ್ಯವಾದದ್ದು.)

— ರಾಮಕೃಷ್ಣ.



ಪ್ರಬಲ ರಾಜಕೀಯ ಪಕ್ಷಕ್ಕೆ ಸೇರಿರಬೇಕು ಕಣೋ!
ಮೂರೇ ತಿಂಗಳಲ್ಲಿ ಹದಿಮೂರು ಅಂಗುಲ ಹೊಟ್ಟೆ ಬೆಳೆದಿದೆ.

ವಾಕಿಂಗ್ ಹೋಗುವುದು

ನನ್ನ ಪರಿಚಯದವರು ಕೆಲವರಿದ್ದಾರೆ. ಸಾಯಂಕಾಲ ಐದು-ಆರು ಗಂಟೆಯ ಹೊತ್ತಿಗೆ ಅವರೆಲ್ಲರದೂ ಒಂದೇಕಾರ್ಯ ಕ್ರಮ- 'ವಾಕಿಂಗ್ ಹೋಗುವುದು.

'ವಾಕಿಂಗ್' ಎಂದಕೂಡಲೆ ನಮ್ಮ ಕಲ್ಪನೆಗೆ ಬರುವ ವಿಚಾರಗಳು ಹಲವು ಬೊಜ್ಜು ಕರಗಿಸುವ ಸಂಭ್ರಮ, ಕಾಯಕಲ್ಪದ ಕಸರತ್ತು, ಗಾಳಿ ಕುಡಿಯುವ ಗೀಳು, ನಿಸರ್ಗ ನಿರೀಕ್ಷಣೆ-ಕೊನೆಗೆ ಇದು ಯಾವುದೂ ಅಲ್ಲದಿದ್ದರೆ ನಾಯಿ ಮೇಯಿಸುವ ಕಾರ್ಯಕ್ರಮ ಎಂದು ತಿಳಿಯುತ್ತೇವೆ. ಹೀಗೆ ಉದ್ದಕ್ಕೂ ಪಾದ ಬೆಳೆಸಿಬರುವ ವರ್ಗಕ್ಕೆ ಸೇರದೆ ಒಂದೊಂದು ವಿಶಿಷ್ಟರೀತಿಯಲ್ಲಿ 'ವಾಕಿಂಗ್' ಹೋಗುವವರು ಕೆಲವರಿದ್ದಾರೆ.

ನಮ್ಮ ಭೀಮಣ್ಣನನ್ನ ತೆಗೆದುಕೊಳ್ಳಿ. ಐದು ಗಂಟೆಗೆ ಆಫೀಸಿನಿಂದ ಬಂದು, ಸೂಟು ಬಿಚ್ಚಿ ಎಸೆದು ಟವಲು ಹೆಗಲಿಗೇರಿಸಿ ಕಾಫಿ ಕುಡಿದು ಆತ 'ವಾಕಿಂಗ್' ಹೊರಡುತ್ತಾನೆ. ಅವರ ಮನೆಗೆ ಎರಡು ಫರ್ಲಾಂಗು ದೂರದಲ್ಲಿ ಸದಾಕಾಲದಲ್ಲಿಯೂ ಕಿರಿಚುವ ಒಂದು ಹೋಟೆಲಿದೆ. ಅಲ್ಲಿ ಬಂದು ಮಸಾಲೆ ಮೆದ್ದು, ಕರಿದ ಹಾಲಿನ ಕಾಫಿಯನ್ನು ಬಸಕೊಂಡು, ಪಕ್ಕದ ಸ್ಟೇಷನರಿ ಅಂಗಡಿಯಲ್ಲಿ ನಶ್ಯ ಸೇದುತ್ತಾ ಎಂಟು ಗಂಟೆಯತನಕ ಪ್ರತಿಷ್ಠಿತನಾಗಿರುತ್ತಾನೆ, ಭೀಮಣ್ಣ. ಈ ನಡುವೆ ಯಾರಾದರೂ ಅವನ ಮನೆಗೆ ಹೋಗಿ 'ಭೀಮಣ್ಣ ಇದಾರೆಯೇ?' ಎಂದು ಕೇಳಿದರೆ, "ಅವ್ರಿಲ್ಲ, ವಾಕಿಂಗ್ ಹೋಗಿದಾರೆ" ಎಂದು ಉತ್ತರ ಬರುತ್ತದೆ.

ಇದೇ ರೀತಿಯಲ್ಲಿ ಇನ್ನು ಕೆಲವರು ಮನೆಯಿಂದ ಹೊರಟು, ಅದೇ ಬೀದಿಯ ತುದಿಯಲ್ಲಿರುವ ಸ್ನೇಹಿತರ ಮನೆಯಲ್ಲಿ ತಾಸೆರಡುತಾಸು ಇಸ್ಪೀಟು ಆಡಿಬಂದು ವಾಕಿಂಗ್ ಕಾರ್ಯಕ್ರಮವನ್ನು ನೆರವೇರಿಸುತ್ತಾರೆ.


ಇನ್ನು ನಮ್ಮ ಗೋಪಾಲಿ ಇದ್ದಾನೆ ಅವನ ವಾಕಿಂಗ್ ರೀತಿ ನವನವೀನ. ಮನೆಯಿಂದ ಹೊರಟು, ಹತ್ತೇಗಜ ದೂರದಲ್ಲಿರುವ ಬಸ್‌ಸ್ಟಾಪಿಗೆ ಬಂದು ಕಾಯುತ್ತಿದ್ದು ಸಿಟಿಬಸ್ಸು ಬಂದೊಡನೆ ಹತ್ತಿ ಪಾರ್ಕಿಗೆ ಹೋಗುತ್ತಾನೆ. ಅಲ್ಲಿ ಹಚ್ಚನೆಯ ನೆಲದಮೇಲೆ ಮಲಗಿ, ಪದ್ಯ ಪುಸ್ತಕವೊಂದರ ಹಾಳೆ ಮಗುಚುತ್ತಾ ಎಳೆಹುಲ್ಲಿನ ಎಸಳುಗಳನ್ನು ಕಚ್ಚಿ ಕಚ್ಚಿ, ಥೂ ಥೂ ಅನ್ನುತ್ತಿದ್ದರೆ ಕತ್ತಲಾಗುತ್ತದೆ. ಸರಿ, ಮತ್ತೆ

ಸಿಟಿಬಸ್ಸಿಗಾಗಿ ಕಾಯುತ್ತಿದ್ದು ಬಸ್ಸು ಬಂದೊಡನೆ ಹತ್ತಿ ಮನೆಗೆ ಬಂದರೆ 'ವಾಕಿಂಗ್' ನೆರವೇರಿದ ಹಾಗೆಯೆ ಅಲ್ಲವೆ?

ಆದರೆ ನಮ್ಮ ಗರುಡಮೂರ್ತಿ ಮಾತ್ರ ಹಾಗಲ್ಲ. ಧಿನವೂ ಸಾಯಂಕಾಲ ಹತ್ತಾರುಮೈಲು ಸುತ್ತಿ ಬರುತ್ತಾನೆ. ನಗರದ ಈ ತುದಿಯಿಂದ ಆ ತುದಿಯುವರೆಗೆ ಉದ್ದಕ್ಕೂ ಹೋಗೇ ಬರುತ್ತಾನೆ. ಅವನ ರೀತಿ ಮೆಚ್ಚುವಂಥಾದ್ದು. ಅವನು ವಾಕಿಂಗ್ ಹೊರಟವನು ಮನೆ ಬಾಗಲಲ್ಲಿ ಸೈಕಲ್ ಹತ್ತಿದರೆ ಪುನಃ ಮನೆಗೆ ಬಂದಾಗಲೇ ಕೆಳಗಿಳಿಯಬೇಕು. ದಾರಿಯಲ್ಲಿ ಸ್ನೇಹಿತರು ಬೇಕಾದರೆ ಸಿಕ್ಕಲಿ, ಎಷ್ಟಕ್ಕೂ ಕೆಳಗಿಳಿಯದೆ ಸರ್ಕಸ್‌ನವರಂತೆ ಸೈಕಲ್ ನಡೆಸುತ್ತಾ ನಾಲ್ಕು ಮಾತನಾಡಿ ಮುಂದೆ ಸಾಗುತ್ತಾನೆ.

— ರಾಮಕೃಷ್ಣ.

—— o ——



"ಈ ಕಾದಂಬರಿಯಲ್ಲಿ ವೇಗವಿದೆ ಓಟವಿದೆ" ಎಂದು ವಿಮರ್ಶಕ ಹೇಳಿದ್ದು ಸುಳ್ಳಲ್ಲ!

ಉದರರೋಗಿ

ಯುನಾನಿ ಆಸ್ಪತ್ರೆಯ ಕಾಂಪೌಂಡರ್ ಸದಾಶಿವು ತನ್ನ ಕಿರುಚಲು ಕಂಠದಿಂದ "ಬಾದಾಮಿ ಲೇಹ್ಯ ಮುಗಿದುಹೋಯ್ತು ಸಾರ್" ಎಂದಿದ್ದು ಕೇಳಿ ನನ್ನ ನೆತ್ತೀಲಿ ನೆರಿಗೆ ಮೂಡಿತು. ಎಲ, ಎಲಾ! ಮೂರು ಮಣ ಲೇಹ್ಯ ಮೂರು ತಿಂಗಳ್ಗೇನೆ ಮುಗಿದ್ಹೋಯ್ತೂಂತಂದೆ ಹ್ಯಾಗೆ ಏನ್ಕತೆ ಅಂತ ಅನ್ನಿಸ್ತು. ಅವನ ಮೇಲೆ ಗುಮಾನಿ ಆಯ್ತು. "ಏನಯ್ಯಾ ರುಚಿಯಾಗಿದೇಂತ ನೀನೇ ಲಪ್ಟಾಯಿಸಿ ಬಿಟ್ಯೋ ಏನು" ಅಂತ ಅಂದೆ. ಛೆ, ಛೆ, ನಮ್ಮಂಥೋರ್ಗೆ ಅದು ದಕ್ಕೋಂತ ಪದಾರ್ಥ ಅಲ್ಲ ಸಾರ್. ಅಷ್ಟು ಯಾಕೆ. ತಾವು ಪೇಶೆನ್ಸ್ ತೆಗೊಂಡು ಪೇಶೆಂಟುಗಳ ಅಂದ್ರೆ ಉದರ ರೋಗಿಗಳ ಲಿಸ್ಟ್ ನೋಡಿದ್ರೆ ತಾನೇ ತಿಳಿಯುತ್ತೆ" ಅಂತ ಸಲಹೆಯಿತ್ತ. ಸರಿ ಲಿಸ್ಟ್‌ನೆಲ್ಲಾ ತಿರುವಿದೆ. ಉದರ ರೋಗಿಗಳ ನಾಮವನ್ನು ಉಚ್ಚರಿಸಿದೆ. ಮೊದಲನೆಯೋನು ಕರಪಯ್ಯ, ನಂತರ ಬರುತ್ತಿದ್ದೋನು ಹುಸೇನ್ ಸಾಬಿ ಆ ಮೇಲೆ ಸೇಟ್ ಮಕಮಲ್, ಇವನಾದ ಮೇಲೆ ಫಕೀರು ಈ ಮೇಲ್ಕೆ ಹೇಳಿದ ಸದರಿ ರೋಗಿಗಳು ಮೂರು ತಿಂಗಳಿಂದ ಮಾಮೂಲಾಗಿ ಒಂದೇ ರೋಗದಿಂದ ನರಳ್ತಾ, ಅವರವರ ಟೈಮಿಗೆ ಸರಿಯಾಗಿ ಬರುತ್ತ ಒಂದೇ ಔಸ್ತೀನ ಪಟ್ಟು ಹಿಡ್ದು ತೆಗೊಂಡು ಹೋಗ್ತಿದ್ದನ್ನ ನೋಡಿ ನನಗೆ ಸ್ವಲ್ಪ ಸಂಶಯವಾಯ್ತು. "ಎಲ, ಎಲಾ, ಏನಿದು ಒಳಮರ್ಮ, ಗುಟ್ಟು" ಅಂತ ತಲೆ ತುರಿಸಿದೆ "ಈ ದಿನ ಈ ಕೇಸನ್ನ ಇತ್ಯರ್ಥ ಮಾಡೇಬಿಡ್ತೀನಿ" ಅಂತ ಮೀಸೆಯನ್ನು ಮೃದುವಾಗಿ ನೀವರಿಸಿದೆ.

ರಾಕೋರಾಕು 9½ ಘಂಟೆಗೆಲ್ಲಾ ಕರುಪಯ್ಯ ಧ್ಯಾನಿಸಿದ. ಸಿಡುಬಿನ ಕಲೆಯಿಂದೊಳಗೊಂಡ ಸಿಡುಕಿನ ಮುಖವನ್ನು ಚಾಚಿ ತನಗಿರುವ ಉದರ ರೋಗದ ವರ್ಣನೆಯನ್ನು ಮಾಡಿ ಲೇಹ್ಯದೊಂದಿಗೆ ಹೊರಟುಹೋದ. ಕಾಲು ಘಂಟೆ ಕಳೆದ್ಮೇಲೆ ಹುಸೇನ್ ಸಾಬಿ ಪ್ರತ್ಯಕ್ಷನಾದ. "ಉದರ ರೋಗ ಉಲ್ಬಣವಾಗಿದೆ" ಇವತ್ತು "ಲೇಹ್ಯ ಸ್ವಲ್ಪ ಜಾಸ್ತೀನೇ ಕೊಡಿ" ಅಂತಂದ. "ಲೇಹ್ಯ ಬೇಡ ಇವತ್ತೊಂದು ಭಸ್ಮ ಕೊಡ್ತೀನಿ, ಜೇನುತುಪ್ಪದ ಜೊತೆಗೆ ನೆಕ್ಕು" ಅಂತ ಹೇಳಿದೆ. ಭಸ್ಮದ ಸುದ್ದಿ ಕೇಳಿ ಆತ ಬೆದರಿದ. "ಸಾರ್, ಭಸ್ಮ ಬೇಡಿ ಸಾರ್, ಆ ಲೇಹ್ಯವೇ ಕೊಟ್ಬಿಡಿ ಅಂತ ಗೋಗರೆದ. ಎಲ, ಎಲಾ! ಈತನ್ಗೇನು ತಲೇತಿರ್ಪು ಕಳ್ಕೊಂಡಿದ್ಯೊ" ಅಂತನ್ನಿಸ್ತು. ಆತನ್ನ ಕೆಕ್ಕರಿಸಿ ನೋಡಿದೆ. ಗಡ್ಡ ಮೀಸೆಗಳಿಂದ ಕೂಡಿದ್ದರೂ ಕರಪಯ್ಯನ ಹಾಗೆ ಇದ್ದ ಈತಾನು. "ಕರಪಯ್ಯನ ಕಾಲಿನ ಕೆರವನ್ನೇ ಈತಾನೂ ಮೆಟ್ಟಿದ್ದನ್ನ ನೋಡಿ ಮೋಸ, ಕೃತ್ರಿಮ, ದಗಲಬಾಜಿ" ಅಂತನ್ನಿಸ್ತು ನನ್ಗೆ. ಸರಕ್ಕನೆ

ಆತನ ಗಡ್ಡವನ್ನ ಜಗ್ಗಿದೆ. ಕೇಶರಾಶಿ ಕಳಚಿ ಕೈಗೆ ಬಂತು. ಹುಸೇನ್ ಸಾಬಿ ಕರಪಯ್ಯನಾದ. "ಏನಯ್ಯಾ ಇದು ನಿನ್ನ ವೇಶಾ" ಅಂತ ಆತನ್ನ ಗದರಿಸಿದೆ "ಉದರ ರೋಗದ ಮರ್ಮವನ್ನು ಬೊಗಳು" ಅಂತ ಬೆದರಿಸಿದೆ. ಸುತ್ತ ಮುತ್ತ ಯಾರೂ ಇಲ್ಲದ್ದನ್ನ ಗಮನಿಸಿ ಆತ ಒಂದು ಬೀಡಿಯನ್ನು ಹಚ್ಚಿಸಿ ತನ್ನ ಕಥೆಯನ್ನು ಶುರುಮಾಡಿದ. ನಾನು ಸಾವಧಾನವಾಗಿ ನನ್ನ ಸಿಗರೇಟಿನ ಧೂಮ ತರಂಗವನ್ನು ನೋಡುತ್ತಾ ಆ ಪ್ರಾಣಿಯ ಕಹಾನಿಗೆ ಕಿವಿ ಕೊಟ್ಟೆ.

ವಾಲ್ಮೀಕಿ ನಾಟ್ಕದ ಕಂಪೆನೀಲಿ ನಾನು ಪರ್ದೆ ಎಳೆಯೋಕೆ ನನ್ನ ಚಿಕ್ಕ ವಯಸ್ನಲ್ಲೇ ಸೇರಿ ನುರಿತವನಾದೆ ಸಾರ್. ನಮ್ಕಂಪ್ನಿ ರಾಮಾಯಣದಾಟ ಅಂದ್ರೆ ಬಹಳ ಪ್ರಸಿದ್ಧಿ. ಒಂದ್ಸಲ ಪೂರ್ತಿ ರಾಮಾಯ್ಣಾನ ಗಿರ್ಧಾಯಿಸಿದ್ದ ಜನರೆದುರ್ಗೆ ಆಡ್ತಿದ್ವಿ ಸಾರ್. ಆಗ ಲಂಕಾದಹನದ ಸೀನಿನಲ್ಲಿ ಹನುಮಂತನ ಬಾಲಕ್ಕೆ ಹಚ್ಚಿದ ಬೆಂಕಿ ಬರೀ ಲಂಕೇನೇ ಸುಡ್ದೆ ಕಂಪ್ನೀನೇ ಸುಟ್ಹಾಕ್ತು ಸಾರ್, ಕಂಪ್ನಿ ಯಜಮಾನ ಶ್ಯಾಮೈಂಗಾರಿ ಮೇಲ್ಕೋಟೆ ಸೇರಿದ ಕಂಪ್ನೀಲಿದ್ದಾಗ್ಲೆ 2 ಮಕ್ಕಳ ತಾಯಿ ಮಂಗಮ್ಮ ನನ್ಮುಕ್ತ್ರಿಗೇಗೆ ಗಂಟುಬಿದ್ಲು ತಂಗೀತರ ಬಂದೋಳು ಮನೆಗೆ ಬಂದ ಮೂರೇ ದಿನಕ್ಕೆ ನನ್ನ ಮಡ್ದಿಯಾದ್ಲು. ನಮ್ಮಾತನ ಜೋಪ್ಡೀಲೆ ನಾವಿರೋದೀಗ" ಅಂತ ಹೇಳಿ ಆತ ಬೀಡಿಯನ್ನು "ಧಂ" ಎಳೆದು ಧೂಮವನ್ನು ಹೊರಚೆಲ್ಲಿದ. "ಅಲ್ಲಯ್ಯಾ ಇದೆಲ್ಲಾ ನಿನ್ನ ಜೀವನ ಚರಿತ್ರೆ ಆಯ್ತು. ಉದರ ರೋಗಕ್ಕೂ ಇದಕ್ಕೂ ಸಂಬಂಧ ಕಲ್ಪಿಸಯ್ಯಾ" ಎಂದೆ ನಾನು.

"ಅನ್ನೆಂಪ್ಲಾಯ್ಡ್ ಅದ್ರಿಂದ ಉಡೋದಕ್ಕೆ ಉಡುಪಿದ್ರೂ, ತಂಗೋಕೆ ತಾವಿದ್ರೂನೂ ಉದರಕ್ಕೆ ಊಟ ಇರ್ಲಿಲ್ಲ. ಸರಿ ನನ್ಹೆಂಡ್ತೀನ ಬಸ್ರಿ ಅನ್ನೋ ನೆಪ ದಿಂದ್ಲೂ, ನನ್ನ ಮಲ ಮಕ್ಕಳ್ಗೆ ಇಲ್ಲದ ರೋಗ ಬರ್ಸಿ ಆಸ್ಪತ್ರೆಗೆ ಸಾಗ್ಹಾಕಿದೆ. ಹಾಲು ಬ್ರೆಡ್ಡಿನಿಂದ ಅವುಗಳ ಜೀವನ ನಡೀತಿದೆ. ಕೆಲ್ಸ ಹುಡುಕ್ತಿರೋ ನಾನು ಆಸ್ಪತ್ರೆ ಸೇರ್ರೋದು ಸುಖ್ವಿಲ್ಲ' ಅಂದಿದ್ದೆ ಕೆಲ್ಸ ಹಾಗೇ ಅಲೆದಾಡ್ತಿರೋವಾಗ ನಿಮ್ಮ ಬಾದಾಮಿ ಲೇಹ್ಯದ ರುಚಿ ತಟ್ಟೆ, ಆಗ್ಲಿಂದ ನಾಲ್ಕು ಜನ್ರ ವೇಶವನ್ನು ನಾನೇ ಧರ್ಸಿ, ಲೇಹ್ಯ ತೆಗೊಂಡು ದಿನಕ್ಕೆ 2 ದಫ 2 ಉಂಡೇನ ತಿಂದು ಸಂಸಾರ ರಥ ಉರಳಿಸ್ತಿದ್ದೀನಿ ಸಾರ್" ಅಂತಂದು ಅರ್ಧ ಸಮೆದಿದ್ದ ಬೀಡೀನ ನೆಲಕ್ಕುಜ್ಜಿ ಜೇಬಿನಲ್ಲಿರಿಕೊಂಡ. ಎಂಪ್ಲಾಯ್ಮೆಂಟು ಸಿಕ್ಕೊವರ್ಗೂ ಲೇಹ್ಯವನ್ನು ತಪ್ಪಿಸ್ಬೇಡಿ ಸಾರ್" ಅಂತ ಗೋಗರ್ದು ಕಳ್ಚಿದ ಗಡ್ಡವನ್ನು ಅಂಟಿಸಿಕೊಂಡ.

ಆಗಲಪ್ಪಾ ಅಂತ ಹೇಳಿ ಆ ಪರದಾಚಾರ್ಯನಿಗೆ ಹೊಸ ಬಾಟ್ಲೆಯಿಂದ ಲೇಹ್ಯವನ್ನು ಕೊಡಿಸಿದೆ. ನಾನು ಸೇರ್ ಮಕಮಲ್‌ಗೋಸ್ಕರ ಕಾದು ಕುಳಿತೆ.

—ಕೆ. ಎನ್. ಕಿಟ್ಟೇನ್.

ಮೀನಾಕ್ಷಿ ವ್ಯಾಪಾರ

ಗೀರು ಹುಬ್ಬು ಏರಿಸಿ ಮುಖದಲ್ಲಿ ಕಿರು ನಗೆ ಬೀರಿ ನಿಂತಿದ್ದಳು. ಗೊತ್ತು ಅವಳಿಗೆ—ಇವತ್ತು ಸಂಬಳದ ತಾರೀಖು ಎಂದು. ಹೌದು ಹಿಂದಿನ ದಿನವೇ ಹೇಳಿದ್ದಳು ನಾಳೆ ಪೇಟೆಗೆ ಹೋಗೋಣವೆಂದು. ನಾನೂ ಹೂಂ ಅಂದಿದ್ದೆ ಅವಳು ಮುಡಿದ ಮಲ್ಲಿಗೆ ದಂಡೆ ಮೂಸುತ್ತಾ. ಇನ್ನು ಬಿಡುತ್ತಾಳೆಯೇ ಹೊರಡಲೇ ಬೇಕಿತ್ತು. ಆದರೆ ಅದೇನು ಇಷ್ಟು ಅವಸರ!

"ಅಲ್ವೆ – ಇನ್ನೂ ಮನೆಗೆ ಬರುವುದಕ್ಕೆ ಪುರುಸೊತ್ತಿಲ್ಲ ಆಗಲೇ ಹೊರಡುವ ಸನ್ನಾಹ ನಡೆಸಿದ್ದಿಯಲ್ಲಾ ಸ್ವಲ್ಪ ಸುಧಾರಿಸಿಕೊಳ್ಳುವುದೂ ಬೇಡವೆ?...."

—ಮನದನ್ನೆ ಮಾತೇ ಆಡಲಿಲ್ಲ. ಕೈಲಿದ್ದ ಚೀಲ ಮೇಜಿನ ಮೇಲೆಸೆದು ಮೂತಿ ಸೊಟ್ಟಮಾಡಿ ಅಡಿಗೆಮನೆಗೆ ಹೋದಳು. ಏನು ಕೋಪಾನಪ್ಪ ಇವಳಿಗೆ-ನಾನೇನೂ ಮಾತೇ ಆಡಬಾರದೇ? ಇವಳು ಶೃಂಗರಿಸಿ ನಿಂತು ಬಿಟ್ಟಿದ್ದರೆ ನಾನೂ ಸಿದ್ಧನಾಗಿ ಹಿಂಬಾಲಿಸಬೇಕೇನೊ.

"ಲೇ–ಲೇ–ಇಲ್ಲಿ ಬಾರೆ ಇಲ್ಲಿ ...ಬರ್‍ತಿಯೋ ಇಲ್ವೊ!"

—ಅವಳೇಕೆ ಬರಬಾರದು-ಕರೆದ ಕೂಡಲೆ. ಅರೆ ಬಂದಳು. ಕೈಯ್ಯಲ್ಲಿ ತಟ್ಟೆ–ಕೇಸರಿಭಾತು, ಹೀರೇಕಾಯಿ ಬೋಂಡ!! ಗಟ್ಟಿ ಕಾಫಿ ಅರಪಾವಿನ ಲೋಟದಲ್ಲಿ. ಭೇಷ್ ಅರ್ಧಾಂಗಿ ಅಂದರೆ ಹೀಗಿರಬೇಡವೆ.

ಗಂಡಸು ಯಾವಾಗಲೂ ತಮ್ಮ ಮೆಚ್ಚುಗೆಯನ್ನು ಮಡದಿಯ ಎದುರಿಗೇ ತೋರಿಸುವುದು ತನ್ನ ದೌರ್ಬಲ್ಯದ ಕುರುಹು ಎಂದು ಗುರುಗಳು ಅಂದದ್ದು ನೆನಪಿಗೆ ಬಂದು "ಅಲ್ಲಿಡು–" ಎಂದು ಬಿಗುಮಾನದಲ್ಲೇ ಹೇಳಿದೆ. ಮೇಲಾಗಿ ಜೇಬಲ್ಲಿನ ಅಂದು ಬಂದ ಸಂಬಳವೂ ನನ್ನ ಅಹಂಕಾರದ ಅಧಿಕಾರವಾಣಿಗೆ ಕಾರಣವಾಗಿತ್ತು.

"ಕೈಕಾಲು ಮುಖ ತೊಳೆಯೋತನಕ ಅವಸರವೇ-ಆಗಲೇ ತಂದು ಬಿಟ್ಟೆಯಲ್ಲ ..."

"ಹೊತ್ತಾಗೊಲ್ವೆ ..."

"ಸರಿಹೋಯ್ತು–ನಿನ್ನೆ ರಾತ್ರಿ ಏನು ಹೇಳಿದ್ದಿರಿ, ನೆನಪಿಲ್ಲವೆ?"

"ಯಾತಕ್ಕೆ?"

"ಏನಂದಿದ್ದೇ?...." ಅವಳನ್ನು ಸತಾಯಿಸಲೇ ಹಾಗಂದದ್ದು.

"ಹೀಗೋ ವಿಷಯ ಸರಿ"

—ಎಂದು ತಟ್ಟೆಯೊಡನೆ ಅಡಿಗೆಮನೆ ಸೇರಿದಳು. ನಾನು ಕೈಕಾಲು ತೊಳೆದು ಬಟ್ಟೆ ಬದಲಿಸಿ ಬಂದಾಗ ಆಶ್ಚರ್ಯವಾಯಿತು. ಇವಳು ಮೀನಾಕ್ಷಿಯೇ ಎಂದೆನಿಸಿತು. ಮಯೂರ ಬಣ್ಣದ ರೇಷ್ಮೆ ಸೀರೆ – ಅದಕ್ಕೊಪ್ಪುವ ರವಿಕೆ, ಅಚ್ಚುಕಟ್ಟಾಗಿ ತುರುಬು ಹಾಕಿ ಮೇಲೆ ಮಲ್ಲಿಗೆ ದಂಡೆ, ನವಿರಾದ ಪೌಡರು ಲೇಪಿಸಿ, ತುಟಿಗೆ ಎಲೆ ಅಡಿಕೆಯ ಕೆಂಪು ಲೇಪಿಸಿ ಕಾಲಿಗೆ ಜರಿ ಚಪ್ಪಲಿ ಹಾಕಿ 'ಬೈ ಬೈ ಟ ಟ್ಟಾ' ಹೇಳಲು ತಯಾರಾಗಿ ನಿಂತಿದ್ದಳು.

"ಎಲ್ಲಿಗೇ ೀ...."

"ಎಲ್ಲಿಗೋ ೀ...."

"ಓಹೋ ಮುಯ್ಯಿ ತೀರಿಸುವ ಸನ್ನಾಹವೊ"

"ನಾನು ಹೊರಡುವಾಕೆ"

"ಹೊರಡು–ಆ ನಿನ್ನ ಸ್ನೇಹಿತೆ ಮನೆಗೆ ತಾನೇ ೀ"

"ಅಲ್ಲ– ಪೇಟೆಗೆ– ನೀವು ಬರದೇ ಇದ್ದರೆ ನನ್ನ ಪ್ರೋಗ್ರಾಮು ನಿಲ್ಲಿಸೋಕೆ ಆಗುತ್ಯೇ?"

—ಎಲಾ ಇವಳ, ನನ್ನನ್ನೂ ಈ ಸ್ಥಿತಿಗೆ ತಂದಳೇ–ಅವಳು ಹಾಗನ್ನಬಹುದೆ– –ನಿನ್ನೆ ರಾತ್ರಿ 'ನೀವೂ ಬರಲೇಬೇಕು–ಖಂಡಿತಾಂದ್ರೆ' ಎಂದು ಲಲ್ಲೆ ಹೊಡೆದ ಹೆಣ್ಣು –ಈಗ ಸಿಂಹಿಣಿಯಂತೆ ಎದುರುಬಿತ್ತೆ? ಇರಲಿ, ಇವಳಿಗೆ ಸರಿಯಾದ ಬುದ್ಧಿ ಕಲಿಸಬೇಕು. ಹೀಗೆ ರಂಗು ರಂಗಾಗಿ ಶೃಂಗರಿಸಿಕೊಂಡು ರತಿಯಂತೆ ನಿಂತಾಗ ಸೊಗಸಾದ ಮುತ್ಸಂಜೆಯಲ್ಲಿ ಜೊತೆಗೆ ಜೋತುಬಿದ್ದು ಓಡಿ ಬಂದೇ ಬರುವೆನೆಂದು ಮಾಮೂಲಿನಂತೆ ತಿಳಿದಿದ್ದಳು.

ನಾನೊಂದು ಗಂಡು ಜೀವ ಇಂಥದಕ್ಕೆಲ್ಲಾ ಜಗ್ಗೋ ಜೀವವಲ್ಲ ಅನ್ನೋದು ಅವಳಿಗೆ ತಿಳೀದು. ಪಾಪ ಹೆಣ್ಣಲ್ಲವೇ ಎಷ್ಟಾದರೂ–ಅಷ್ಟೇ ಅದರ ಬುದ್ಧಿ–ಹೋಗಲಿ ನನಗೇನು. ಪೇಟೆಗೆ ಹೋಗ್ತಾಳಂತೆ, ಹಣದ ಚೀಲ ನನ್ನಲ್ಲಿರುವಾಗ ಇವಳು ಈ ಶೀವಿಯಿಂದ ಎಲ್ಲಿಗೆ ಹೋದರೂ ಬರಿಗೈಯ್ಯಲ್ಲಿ ಮೊಳ ಹಾಕಿದಂತೆಯೇ—

"ಓಹೋ ಹಾಗೋ ಸರಿ ಹೊರಡಬಹುದು...." ಎಂದು ಹೇಳಿಬಿಟ್ಟೆ. ಅಡಿಗೆ ಮನೆಯಿಂದ ತಿಂಡಿತಟ್ಟೆ ತಂದಿಡದೇನೇ ಹೊರಬಾಗಿಲ ಬಳಿ ಹೋದಳು. ನನಗೆ ಜೀವ ನೊಂದುಕೊಂಡಿತು – ಅಯ್ಯೋ ಎಂಥಾ ಚಲುವಾಗಿದ್ದಾಳೆ – ನನ್ನ ಜೊತೆಗೇ ಹೊರಟಿದ್ದರೆ ಏನೊಂದು ಸೊಗಸು–ಮರುಕ್ಷಣವೇ ಪುರುಷ ಪುಂಗವ, ಅಂದೇ ಸಂಬಳ-ಕೊಬ್ಬಿನ ದೇಹ. ಹೋಗಲಿ – ಅತ್ತ ಅವಳು ಹೊರಡುತ್ತಲೇ ಇತ್ತ ನಾನೂ ಅವಳ

ಹಿಂದಿನ ಬಸ್ಸಿನಲ್ಲಿ ಮಾರ್ಕೆಟ್ಟು ಸೇರಿ ಅವಳಿಗೆ ಸುಸ್ತುಮಾಡಿಸಬೇಕೆಂದು ಅಂದು ಕೊಂಡೆ.

ಇಷ್ಟರಲ್ಲಿ ಅಮ್ಮಾ ಅವರ ಸವಾರಿ ಹೊರಟೇಬಿಟ್ಟಿತ್ತು. ನಾನು ಗಬಗಬನೆ ತಿಂದು ಕಾಫಿ ಬಸಿದು, ಮಾವ ಕೊಟ್ಟ (ಮೀನಾಕ್ಷಿ ಖಂಡಿಸಿದ?) ಸೂಟು ಬೂಟು ಹ್ಯಾಟು ಹಾಕಿ ಹೊರಡಲು ತಯಾರಾದೆ.

—ಎಲಾ ಎಂಥಾ ಕೊಬ್ಬು ಇವಳಿಗೆ. ಹೊರಟೇ ಹೋದಳಲ್ಲಾ - ಎಷ್ಟು ಸೊಗಸಾಗಿ ಕಂಡಳು ಮೀನಾಕ್ಷಿ? ನಾನೂ ಜೊತೆಗಿರಬೇಕಾಗಿತ್ತು.

ಈ ಯೋಚನೆಯಲ್ಲೇ ಜೇಬಿಗೆ ಕೈಹಾಕಿದೆ – ಹಾಗೂ ಮಾರ್ಕೆಟ್ಟಿನ ಹತ್ತಿರ ಅವಳು ಸಿಕ್ಕೇ ಸಿಗುವಳೆಂದು ಹೊರಡಲನುವಾದೆ.

ಅರೆ! ಪರ್ಸ್ ಎಲ್ಲೀ?— ಆಫೀಸಲ್ಲೇ ಉಳಿಯಿತೆ, ದಾರಿಯಲ್ಲಿ ತಸ್ಕರೇಣಃ? ರಾಮ ರಾಮ ಒಂದಲ್ಲ ಎರಡಲ್ಲ ಇಡೀ ಸಂಬಳ. ನನಗೆ ಚೆನ್ನಾಗಿ ನೆನಪು ಜೇಬಿಗೇ ಹಾಕಿದೆ, ಮತ್ತೆ?– ಇದೆಲ್ಲಿ ಗ್ರಹಚಾರ. ಸುಸ್ತು, ಮಾರ್ಕೆಟ್ಟಿನಲ್ಲಿ ಅವಳನ್ನೂ ಕರೆದುಕೊಂಡು ನನಗೆ ಒಂದು ಹೊಸ ಟೈ, ಒಂದುಜತೆ ಬೂಡ್ಸು, ಒಂದು ಸೆಟ್ಟು ಕ್ರಿಮೆಂಟ್ಸ್ ಗುಂಡಿ, ಹೊಸ ಗಡಿಯಾರದ ಚೈನು ಎಲ್ಲಾ ಕೊಳ್ಳೋಣಾಂತ ಇದ್ದೆ ನಲ್ಲಾ–ಅವಳು ಇದ್ದಿದ್ದರೆ ಏನಾದರೂ ಸಿಕ್ತಿತ್ತೆ? ಹಾಂ! ಗೊತ್ತಾಯ್ತು....ಸರಿ ಸರಿ ಆಫೀಸು ಮೇಜಿನ ಡ್ರಾಯರಲ್ಲಿ ಇಟ್ಟ ನೆನಪು–ಉಹೂ–ಇಲ್ಲ–ಅಲ್ಲೆಲ್ಲಿಟ್ಟೆ?

ಒಬ್ಬಳೇ ಹೊರಟುಹೋದಳಲ್ಲಾ ಇವಳು. ಅಡಿಗೆಮನೆಗೆ ಹೋಗಿ ಸಾಸುವೆ ಡಬ್ಬಿಯಲ್ಲಿನ ನಾಲ್ಕಾಣೆ ಹುಡುಕಿ ಮನೆಗೆ ಬೀಗ ಬಡಿದು ಮಾರ್ಕೆಟ್ಟು ಬಸ್ಸು ಹತ್ತಿದೆ. ಮನಸ್ಸು ಅಲ್ಲೋಲ ಕಲ್ಲೋಲವಾಗಿತ್ತು. ಅವಳು ಜೊತೆಗೆ ಇದ್ದರೆ ನನಗೆ ಪರಿಸ್ಥಿತಿ ಈ ಹೊತ್ತಿನಲ್ಲಿ ಬರುತ್ತಿರಲಿಲ್ಲ, ಸೂಕ್ತ ಸಲಹೆ ಕೊಡುತ್ತಿದ್ದಳು.

ಈ ಯೋಚನೆಯಲ್ಲಿಯೇ ಮಾರ್ಕೆಟ್ಟು ಸೇರಿದಾಗ, ಸವಾರಿ ಹೂವಿನ ಅಂಗಡಿ ಹತ್ತಿರ ಸಿಕ್ಕಿತು. ಗಂಡು ಜೀವ—"ಲೇ" ಎಂದಿತು. ತಿರುಗಿನೋಡಿ ನಸುನಕ್ಕಳು, ಹೂವಿನ ಹಾಗೆ.

"ನಗೋ ವಿಚಾರ ಅಲ್ಲ ಕಣೆ–ಈ ಕಡೆ ಬಾ–ಒಂದು ವಿಚಾರ ಹೇಳಬೇಕಾಗಿದೆ" ಎಂದು ಗಾಬರಿಯಾಗಿ ಹೇಳಿದೆ.

"ಅಷ್ಟೊಂದು ಅಂದು – ಸತಾಯಿಸಿದ್ದು ಸಾಲದೇ – ಮತ್ತೇಕೆ ನನ್ನ ಗೊಡವೆ?"

"ಹುಡುಗಾಟವಲ್ಲ ಕಣೆ–ದೊಡ್ಡ ಯೋಚನೆಯಾಗಿದೆ"

"ಅದೆಲ್ಲಾ ಯೋಚನೆ ಇರ್ಲಿಲ್ಲೇಂದ್ರೆ – ನಾನು ಏನೋ ನಿಮ್ಮ ಜೊತೆ ಕೆಲವು ಸಾಮಾನು ಖರೀದಿಮಾಡೋಣಾಂದ್ರೆ ಒಂದೇಸಲ ರೇಗಿಬಿಡೋದೆ ನೀವು–ನನಗೇನಂತೆ ನಾನು ಅಂದುಕೊಂಡೆ ಗಂಡಸರ ಹಣೆಬರಹವೇ ಇಷ್ಟೂಂತ"

"ಅದು ನಿಜ, ಅದಕ್ಕಲ್ಲಕಣೇ – ಇನ್ನೂ ಮನೆ ಬಾಡ್ಗೆ – ಹಾಲು ಮೊಸರು ಸೊಪ್ಪೆಟೆ ಒಂದೂ ಕೊಟ್ಟಿಲ್ಲ...."

"ಕೊಡಿ ಏನೀಗ...."

"ಏನು ಕೊಡೋದು ನನ್ನ ತಲೆ! ಪರ್ಸೆ ಮಾಯ"

"ಸುಳ್ಳು...."

"ನಿಜ ಕಣೇಂತಿನೀ...."

"ಹೋಗಲಿ ನನಗೇನು"

—ಎಲಾ ಇವಳ, ಎಲ್ಲಿಂದ ಗಂಟು ಬಿದ್ದಳು ಇವಳು–ಗಂಡನ ತಿಂಗಳ ಇಡೀ ಸಂಬಳ ಕಳೆದಿದೆ ಅಂದರೆ ನನಗೇನು ಅಂತಾಳಲ್ಲ ರೇಗಿತು.

"ನಿನಗೇನು–ಹೇಳು–ಹೊಸ ಬೂಡ್ಸ–ಟೈ–ಗುಂಡಿ–ಇಲ್ದಿದ್ರೆ ಬೇಡ–ಮಿಕ್ಕಿದ್ದಕ್ಕೇನುಮಾಡ್ಲಿ ಎಲ್ಲಿಹೋಯ್ತು ಪರ್ಸು...."

"ಅದಕ್ಕೆ ಅಂದದ್ದು ಗಂಡಸರಿಗೆ ಬುದ್ಧಿ ಇಲ್ಲಾಂತ"

"ಮೆತ್ತಗೆ ಅನ್ನೆ–ಮಾರ್ಕೆಟ್‌ನಲ್ಲಿ ಹ್ಯಾಗೆ ಮಾತಾಡಬೇಕೂನ್ನೋದು ತಿಳಿಯೋಲ್ಲವೆ.... ಈಗ ನಾನೇನುಮಾಡ್ಲಿ ಹೇಳು"

"ಏನೂ ಬೇಡ, ನಾನು ಕೆಲವು ಸಾಮಾನು ಕೊಳ್ಳೊತನಕ ನಿಮ್ಮೊಡನೆ ವಾದಕ್ಕೆ ಸಿದ್ಧಳಿಲ್ಲ" ಎಂದು ಹೊರಟೇಬಿಟ್ಟಳು. ನಾನೂ ಹಿಂಬಾಲಿಸಿದೆ ನಾಯಿಯಂತೆ.

ನಾನು ಕಾಣೆನೆ ಅವಳು ಕೊಳ್ಳುವುದು - ಸ್ನೊ, ಪೌಡರು, ಚೋಳಿಪೀಸು, ಮಣ್ಣು ಮಸಿ. ನನ್ನ ಯೋಚನೆ ನನಗೆ ಅವಳ ಪಾಡಿಗವಳು ಗಂಡನಿಗೊದಗಿದ ವಿಪತ್ತು ಗಮನಿಸದೆ ಇದ್ದಾಳಲ್ಲಾ–ಎಲ್ಲಿಹೋಯ್ತು ನನ್ನ ಪರ್ಸು? ನಡೆದಿತ್ತು ಅವಳ ವ್ಯಾಪಾರ.

"ಎಷ್ಟಪ್ಪಾ ಆ ಜಾಡಿ ..."

"ಜಾಡಿಯಾತಕ್ಕೆ....?"

"ಉಪ್ಪಿನಕಾಯಿಗೆ–ನೀವು ಕೊಳ್ಳುವ ಗುಂಡ ಹಾಕಿಡೋಕಲ್ಲ"

"ಐದುರೂಪಾಯಿ" ಅಂಗಡಿಯವ.

"ನಾಲ್ಕೂವರೆ ...ಕೊಡ್ತಿಯೋ"

"ಬೋಣಿಮಾಡೀ ತಾಯಿ ಸಂಜೆ ಯಾಪಾರ...."

"ಇಕ್ಕೊ ತೊಗೋ... ದುಡ್ಡು"

—ಕಣ್ಣು ಕತ್ತಲು ಗುಡಿಸಿತು, ತಲೆ ತಿರುಗಿತು. ತೆಗೆದುಕೊಟ್ಟಳು ಐದು ರೂಪಾಯಿ ನೋಟು–ಕಳೆದುಹೋದ ನನ್ನ ಪರ್ಸಿನಿಂದ. ಪಿತ್ತ ಕೆರಳಿತು ನನಗೆ.

"ಈ ದೋಸೆ ಕಾವಲಿ ಎಷ್ಟು?"

"ಎರಡೂವರೆ"

"ಏ ಕೂಲಿ ಬುಟ್ಟಿತೊಗೊಂಡು ಬಾಯಿಲ್ಲಿ"–ಬಂದ ಕೂಲಿಯವನನ್ನೂ ನನ್ನೂ ಕಟ್ಟಿಕೊಂಡು ಇಡೀ ಮಾರ್ಕೆಟ್ಟು ತಿರುಗಿದಳು. ಸೌಟು ತಗುಲುಹಾಕುವ ಸ್ಟ್ಯಾಂಡು, ನಾಲ್ಕು ಊಟದ ಚಾಪೆ, ಐದು ಪೊರಕೆ, ಇದ್ದಲೊಲೆ, ಒಂದು ಸೆಟ್ಟು ಕಪ್ಪು, ಬಸಿ, ಮೊಗಚೆಕೈ, ಚಕ್ಕುಲಿ ಒರಳು, ಲಟ್ಟಣಿಗೆ....ರಾಮ ರಾಮ–ಅನ್ಯಾಯಮಾಡ್ತಾ ಇದ್ದಾಳಲ್ಲಾ ದುಡ್ಡೆಲ್ಲಾ-ತೌರುಮನೆ ಬುದ್ಧಿ ಎಲ್ಲಿ ಹೋಗುತ್ತೆ. ನನಗೆ ರೇಗಿತು.

"ಆಯ್ತೇನೆ ನಿನ್ನ ವ್ಯಾಪಾರ"

—ಬುಸು ಬುಸು ಅಂತ ನೋಡಿದಳು. ತಪ್ಪು ಅವಳದಿದ್ದೂ ಈ ಕೊಬ್ಬಿನ ನೋಟವೇಕೆ.

"ನಿನ್ನೇ ಕೇಳ್ತಿರೋದು—ಆಯ್ತೋ ನಿನ್ನ ಹಾಳು ವ್ಯಾಪಾರ"

"ಇದು ಮಾರ್ಕೆಟ್ಟೊಂತ ನೀವೇ ಹೇಳಿದಿರಿ—ಅದಕ್ಕೆ ಸುಮ್ಮನಾಗಿದ್ದೇನೆ"

"ಒಳ್ಳೆ ಗ್ರಹಚಾರದವಳು ಗಂಟುಬಿದ್ದೆಯಲ್ಲೇ"

"ಸುಮ್ಮನೆ ಬನ್ನೀಂದ್ರೆ ಸಾಕು ಕಂಡಿದೀನಿ" — ಅಂತ ಅನ್ನಬಹುದೆ ಅರ್ಧಾಂಗಿ ಅನ್ನಿಸಿಕೊಂಡ ಮಾವನ ಮಗಳು. ಹಾಳಾಗಿ ಹೋಗಲಿ ಎಂದು ಬಾಯಿ ಮುಚ್ಚಿ ಅವಳನ್ನು ಹಿಂಬಾಲಿಸಿದೆ. ಹೊಟ್ಟೆ ಉರಿಯುತ್ತಿತ್ತು—ಹೊಸ ಬೂಡ್ಸು-ನೆಕ್ ಟೈ-- ಗುಂಡಿ... ಇನ್ನು ಏನೇನೋ ಕೊಂಡಳು—ನನಗೇನು ಸುಮ್ಮನೇ ಇದ್ದೆ. ಇನ್ನು ಮೇಲೆ ಬಂದ ಸಂಬಳ ಅಪಳಿಗೇ ಕೊಟ್ಟು ಸಾಲದವರಿಗೆ ಅವಳನ್ನು ಸತಾಯಿಸಿ ಅನ್ನೋದು ಅಷ್ಟೆ.

ಜಟಕಮಾಡಿದಳು—ಬುಟ್ಟಿ ಸಮೇತ ನನ್ನೂ ಮನೆಗೆ ಸಾಗಿಸಿದಳು. ನಾನು ಮಾತೇ ಆಡಲಿಲ್ಲ. ನನಗೇಕೆ ಬೇಕು? ಅವಳೇ ಅಂದಳು ಕೆಂಜಗ ಕಡಿದ ಹಾಗೆ

"ಬೂಡ್ಸು ಹರಿದಿಲ್ಲ—ಟೈ ಬೇಕಿಲ್ಲ; ಗುಂಡಿಗೇಕಿಷ್ಟು ದುಡ್ಡು? — ಮನೆಯಲ್ಲಿ ಅಚ್ಚುಗಟ್ಟಿನ ಊಟಕ್ಕೆ ಒಲೆ — ಚಾಪೆ, ಉಪ್ಪಿನಕಾಯಿಗೆ ಜಾಡಿ — ದೋಸೆಗೆ ಕಾವಲಿ ಇದ್ದರೆ ಸೊಗಸಾಗಿ ಮಾಡ್ತೆನೇಂದ್ರೆ ಕೇಳದೆ ಬೂಡ್ಸು ಅಂದಿರಲ್ಲ — ನೀವು ನಾನು ಟೀಪು ಪೌಡರುಕೊಳ್ಳುತ್ತೇನೆಂದು ತಿಳಿದಿದ್ದಿರಿ ಅಲ್ಲವೆ? – ಹಣ್ಣು ತರ್ಕಾರಿ— ಹೂವು ಎಲೆ ಅಡಿಕೆ—ಸಾಲದೆ?" ಎಂದು ತುಂಬುಗಣ್ಣಲ್ಲಿ ನೋಡಿದಳು. ಅವಳ ಈ ಮಾತಿನೆದುರು ನಾನು ತೀರ ಸಣ್ಣವನಾಗಿ ಕಂಡೆ. ಮಾತಾಡದೆ ಉಂಡು ಮಲಗಿದೆ.

—ದಾಶರಥಿ ದೀಕ್ಷಿತ್.

ಸುದ್ದಿ

ಅಮೆರಿಕಾದ ರಾಜಕಾರಣಿಗಳೂ ಅಲಂಕಾರ ಸಹಿತವಾಗಿ ಮಾತನಾಡಲಾರಂಭಿಸಿದ್ದಾರೆ. ನೆಹರೂ ಒಬ್ಬನಿಗೇ ಅಲ್ಲ ಧ್ವನಿತತ್ವ ತಿಳಿದಿರುವುದು; ನಾನೂ ಬಲ್ಲೆ ಎಂದು ಐಕ್ ಸವಾಲು ಹಾಕಿದ್ದಾನೆ. ಪತ್ರಿಕೋದ್ಯಮಿಗಳೆದುರಿನಲ್ಲಿ, ಐಕ್ ಮಾತನಾಡುತ್ತಾ 'ವಾಷಿಂಗ್‌ಟನ್ ಪೋಟಮ್ಯಾಕ್ ಸೇತುವೆಯಮೇಲೆ ಸಾವಿರಾರು ಜನ ದಿನವೂ ಓಡಾಡುತ್ತಿದ್ದರೂ ಸಹ, ಅದು ಸುದ್ದಿಯಲ್ಲ; ಆ ಸೇತುವೆ ಮುರಿದು ಬಿದ್ದರೆ ಅದು ಸುದ್ದಿ' ಎಂದನು.

ಅನಾಹುತಗಳಾದಾಗ ಮಾತ್ರ ಸುದ್ದಿಯ ಸೃಷ್ಟಿಯಾಗುತ್ತದೆ ಎಂಬುದು ಇದರ ಅರ್ಥವೆಂದು, ಮೇಲೇ ಕಾಣುತ್ತಿದೆ; ಸ್ಪಷ್ಟವಾಗಿ; ಅಂಗೈಹುಣ್ಣಿನಂತೆ.

ಮಂತ್ರಿಗಳು ನಿದ್ದೆಮಾಡಿದರೆ ಅದು ಸುದ್ದಿಯಲ್ಲ; ಏಕೆಂದರೆ ಆಗ ಮಾನವ ಕುಲಕ್ಕೆ—ಅವರ ಮನೆಯವರನ್ನು ಬಿಟ್ಟು;—ಅವರ ಕಾಟ ಕೊಂಚವೂ ಇರುವುದಿಲ್ಲ. ಆದರೆ ಸದರೀ ಮಾನ್ಯಮಂತ್ರಿಗಳು ಪ್ರವಾಸಮಾಡಿದರೆ, ಭಾಷಣ ಬಿಗಿದರೆ, ಸುದ್ದಿ ಹುಟ್ಟುತ್ತದೆ. ದೇಶಕ್ಕೆ ಆಗ ಅನಾಹುತ ಸಂಭವಿಸುವ ಸಂದರ್ಭ ಹೆಚ್ಚು.

ದೋಸೆಯಪಲ್ಯ, ಚೆನ್ನಾಗಿದ್ದರೆ ಅದು ಸುದ್ದಿಯಲ್ಲ. ಅದರಲ್ಲಿ ಸತ್ತ ಜಿರಲೆಯಿದ್ದರೆ ಅದು ಸುದ್ದಿ. ಅದರಿಂದ ಮೂರು ಅನಾಹುತಗಳು ಸಂಭವಿಸುತ್ತವೆ. ಮೊದಲನೆಯದಾಗಿ ಜಿರಲೆಯಕೊಲೆ, ಎರಡನೆಯದಾಗಿ ತಿನ್ನುಗನ ಹೊಟ್ಟೆಗೆ ಅಪಾಯ; ಮೂರನೆಯದಾಗಿ ಹೋಟಲಿನವನಿಗೆ ಒಂದು ಅಡಿಷನಲ್ ದೋಸೆಯ ಖರ್ಚು.

ಚಿ. ಸೌ. ನಾಗಮ್ಮನು ಮದುವೆಯಿಲ್ಲದೆ ಮನೆಯಲ್ಲಿದ್ದರೇನು? ಚಿ| ರಾ| ಗರುಡಾಚಾರ್ಯರು ಕೆಲಸವಿಲ್ಲದೆ ಫುಟ್‌ಪಾತಿನಮೇಲೆ ಅಲೆಯುತ್ತಿದ್ದರೇನು? ಅವು ಸುದ್ದಿಗಳಲ್ಲ. ಪೇಪರಿನಲ್ಲಿ ಅವಕ್ಕೆ ಜಾಗವಿಲ್ಲ. ಅವರಿಬ್ಬರಿಗೆ ಮದುವೆಯಾದಾಗ ಅದು ಸುದ್ದಿಯಾಗಿ, ವಿವಾಹ ಮಹೋತ್ಸವ ಎಂಬ ಶೀರ್ಷಿಕೆಯಡಿ ಪ್ರಿಂಟಿತವಾಗುತ್ತದೆ. ಎರಡು ಜೀವಿಗಳ ದುರಂತದ ಸುದ್ದಿ ಅದು! ಬರ್ತ್‌ಕಂಟ್ರೋಲ್ ಚಳುವಳಿಗೆ ಅದು ಅಡ್ಡಿ. ಬರ್ತ್‌ಕಂಟ್ರೋಲ್ ವಾದಿಗಳಿಗೆ ಅದು ಮಹಾ ಆಘಾತ.

ನಾನು ಸುಮ್ಮನಿದ್ದರೆ ಅದು ಸುದ್ದಿಯಲ್ಲ. ಸಂಗೀತ ಹೇಳಿದರೆ ಅದು ಸುದ್ದಿ. ಅಖಿಲಭಾರತ ಸಂಯುಕ್ತ ಶುನಕ—ಗಾರ್ಧಭ ಸಮ್ಮೇಲನಗಳಿಗೆ ನಾನುಹಾಕಿದ ಸವಾಲು ಅದು. ಅವು ನನ್ನೊಡನೆ ಸ್ಪರ್ಧೆಗೆ ಬರುವ ಸಂದರ್ಭವುಂಟು. ಆಗ ಪೋಲೀಸ್‌ಠಾಣಿಗೆ S O S ಕಳಿಸಬೇಕಾಗುತ್ತದೆ.

ಇನ್ನೊಂದು ಬಹುಸೂಕ್ಷ್ಮವಾದ ಮೀಮಾಂಸೆ:—ಸರಾಯಿ ಕುಡಿದವರಿಗೆ ಜುಲ್ಮಾನೆ ಹಾಕಿದರೆ ಅದು ಸುದ್ದಿಯೇ?


ಹೌದು ಎನ್ನುತ್ತೇನೆ ನಾನು.

ಬಡಜನ, ಶ್ರಮಜೀವಿಗಳು, ಸರಾಯಿ ಕುಡಿಯುತ್ತಲೇ ಇರುತ್ತಾರೆ. ಅದು ಸುದ್ದಿಯಲ್ಲ. ಸರಾಯಿ ಕುಡಿದವರ ಹೆಸರನ್ನು ಪ್ರತಿದಿನ ಪೇಪರಿನಲ್ಲಿ ಹಾಕುತ್ತಾ ಹೋದರೆ ಬೇರೆ ಸುದ್ದಿಗೆ ಅವಕಾಶವೇ ದೊರೆಯಲಾರದು. ಅಲ್ಲದೆ ಅವರು ಕುಡಿದರೆ ಅದರಿಂದ ಆಗುವ ಅನಾಹುತವೇನು? ಏನೂ ಇಲ್ಲ

ಆದರೆ ಅವರಲ್ಲೊಬ್ಬರು ಸಿಕ್ಕಿಬಿದ್ದು, ಅವರಿಗೆ ಜುಲ್ಮಾನೆಯಾದರೆ, ಅವರು ಟ್ರೆಷರಿಗೆ ಹಣಕಟ್ಟುತ್ತಾರೆ. ಟ್ರೆಷರಿಗೆ ಕಟ್ಟಿದ ಹಣದ, ಮಂತ್ರಿ, ಸೆಕ್ರೆಟರಿ, ಮ್ಯಾಜಿಸ್ಟ್ರೇಟೇತ್ಯಾದಿಗಳಿಗೂ, ಬಡ ಉಪಾಧ್ಯಾಯ, ಕ್ಲರ್ಕೇತ್ಯಾದಿಗಳಿಗೂ, ಹೋಗಿ ಕೈಸೇರುತ್ತದೆ ಆ ಹಣ ಕೈಗೆ ಸಿಕ್ಕರೆ ಮಂತ್ರಿಗಳು ಮೊದಲಾದ ಬೂರ್ಜ್ವಾಗಳು ಸ್ಪೆನ್ಸರ್ಸ್, ಕೆಂಚುರಿ ಕ್ಲಬ್ಬೇತ್ಯಾದಿಗಳಿಗೂ, ಕ್ಲರ್ಕ್, P. C ಗಳು ಗಲ್ಲಿಯ ಪ್ರೊಲಿಟೇರಿಯಟ್ ಪಡಕಾನೆಗಳಿಗೂ ಹೋಗುತ್ತಾರೆ. ಬರುತ್ತಾ ದೇವರಂತೆ ಉನ್ಮತ್ತರಾಗಿ ಬರುತ್ತಾರೆ. ಅವರ ಕೈಲೇ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗಗಳು. ಆಗ ಆಗುವ ಅನಾಹುತಗಳಿಗೆ ಮಿತಿಯುಂಟೇ?

ಆದುದರಿಂದ ಸರಾಯಿ ಕುಡಿದದ್ದಕ್ಕೆ ಜುಲ್ಮಾನೆ ಹಾಕಿದರೆ ಅದು ಸುದ್ದಿ. ಪೇಪರಿನಲ್ಲಿ ನೋಡಿ. ಪ್ರತಿದಿನವೂ ಇರುತ್ತದೆ.

ಅ. ರಾ. ಸೇ.


...ಶೀಘ್ರದಲ್ಲಿಯೇ ಬರುತ್ತದೆ!...
ರಕ್ತಪಾಶಂ
....a TALLAM Release....



ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

★ ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ. ★

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ ಲಿಮಿಟೆಡ್,

ಮಲ್ಲೇಶ್ವರಂ - - - ಬೆಂಗಳೂರು 3

REG. No. M 4718 KORAVANJI, AUGUST 1954

Printed by B. S. Iyengar, Bangalore City
Publisher—B. N. Gupta. Editor—M. Sivaram